
ಅ. ನ. ಸುಬ್ಬರಾವ್

ಹರಿಹರಪ್ರಿಯ



ಕರ್ನಾಟಕ ಲಲಿತಕಲಾ ಅಕಾಡೆಮಿ



ಹರಿಹರಪ್ರಿಯ

ಪರಂಪರೆಯ ಪುನರ್ ನಿರ್ಮಿತಿ. ಚರಿತ್ರೆಯ ತಿಳುವಳಿಕೆ ಮತ್ತು ವ್ಯಕ್ತಿತ್ವ ಕಾಣ್ಕೆಗಳನ್ನು ತಮ್ಮ ಬರವಣಿಗೆಯಲ್ಲಿ ಒಳಗೊಂಡ ಕನ್ನಡದ ಪ್ರತಿಭಾವಂತ ಹಿರಿಯ ಲೇಖಕರು ಹರಿಹರಪ್ರಿಯ.

ಕಳೆದ ಮೂವತ್ತು ವರ್ಷಗಳಿಂದ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ೩೨ ಕೃತಿಗಳನ್ನು ಪ್ರಕಟಿಸಿರುವ ಹರಿಹರಪ್ರಿಯರು, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಬಹುಮಾನ, ವರ್ಧಮಾನ ಉದಯೋನ್ಮುಖ ಶ್ರೇಷ್ಠ ಸಾಹಿತ್ಯ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ ಮುಂತಾದ ನಾಡಿನ ಮನ್ನಣೆ ಪಡೆದವರು.

ಸುಮಾರು ಇಪ್ಪತ್ತು ವರ್ಷಗಳಲ್ಲಿ ಕೆಲಕಾಲ ಕೆನ್ ಕಲಾಶಾಲೆಯ ಗೌರವ ಅಧ್ಯಾಪಕರಾಗಿ, ಈಗ ಕಲಾಮಂದಿರದ ವಿಶೇಷ ಉಪನ್ಯಾಸಕರಾಗಿ ಕಲಾಚರಿತ್ರೆಯನ್ನು ಬೋಧಿಸುತ್ತಿದ್ದಾರೆ. ೧೯೭೬ರಲ್ಲಿಯೇ ಕಲೆಗೆ ಸಂಬಂಧಿಸಿದ “ರಸರೇಖೆ” ಎಂಬ ಪುಸ್ತಕವನ್ನು ಅನುವಾದಿಸಿದ್ದು ಮಾತ್ರವಲ್ಲದೆ, ಸ್ವತಂತ್ರವಾಗಿ ಕಲೆ ಮತ್ತು ಕಲಾವಿದರ ಬಗ್ಗೆ ಸಾಕಷ್ಟು ಗಂಭೀರ ಬರವಣಿಗೆಯನ್ನು ಹರಿಹರಪ್ರಿಯ ಮಾಡಿದ್ದಾರೆ. ಇದೀಗ ತಾನೇ ಕರ್ನಾಟಕ ಗಾನ ಕಲಾ ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಗೆದ್ದು, ರಾಜೀನಾಮೆ ನೀಡಿದ್ದಾರೆ.

“ಪುಸ್ತಕ ಮನೆ” ಮೂಲಕ ನಾಡಿನ ಸಾಹಿತ್ಯಾಸಕ್ತರ ದಿನನಿತ್ಯದ ಮಾತಾಗಿರುವ ಹರಿಹರಪ್ರಿಯರು, ಈ ಕಾಲದ ಆಕರ ವಿಜ್ಞಾನಿ ಅನ್ನಿಸಿಕೊಂಡವರು. ಸಾಹಿತಿ ಕಲಾವಿದರ ಒಕ್ಕೂಟ, ಬಂಡಾಯ ಸಾಹಿತ್ಯ ಸಂಘಟನೆ, ಕರ್ನಾಟಕ ವಿಕಾಸವೇದಿಕೆ, ದಲಿತಸಂಘರ್ಷ ಸಮಿತಿಯಂತಹ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರು. ಬೀದಿಯಿಂದ ವಿಶ್ವವಿದ್ಯಾಲಯದವರೆಗೆ ಯಾವ ವಸ್ತುವಿಷಯ ಕುರಿತು ಭಾಷಣ ನೀಡಬಲ್ಲ, ಬಹುಮುಖಿ ಸಂಸ್ಕೃತಿಯ ನಿಷ್ಠುರ ಮಾನವತಾವಾದಿ ಚಿಂತಕರು ***ಹರಿಹರಪ್ರಿಯ*** ಅವರು.

ಅ. ನ. ಸುಬ್ಬರಾವ್

ಹರಿಹರಪ್ರಿಯ

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೧

Aa. Na. Subba Rao.
A monograph on the life and works of
Aa. Na. Subba Rao
Author : Hariharapriya, Published by H. Shankarappa,
Registrar Karnataka Lalithakala Academy,
Nrupathunga Road, Bangalore - 560 001

First Edition : 1997

1000 Copies

Price : Rs. 10/-

ಗುರು ಆ. ನ. ಸು ಅವರನ್ನು ಕಂಚಿನ ಎರಕದಲ್ಲಿ
ಮೂಡಿಸಿದ ಶಿಲ್ಪಿ - ವೆಂಕಟಾಚಲಪತಿ

ಪ್ರಧಾನ ಸಂಪಾದಕರು :
ಸಿ. ಚಂದ್ರಶೇಖರ

ಪ್ರಕಟಣಾ ಸಮಿತಿ :
ರಾಮದಾಸ ಅದ್ಯಂತಾಯ
ವೆಂಕಟಾಚಲಪತಿ
ಜಿ. ಮಲ್ಲಿಕಾರ್ಜುನ
ಕೆ. ವಿ. ಸುಬ್ರಹ್ಮಣ್ಯಂ
ರಾಧಾಮಾಧವ ಶೆಣೈ

ಲಿಪಿ ಮುದ್ರಣ, ಬಸವನಗುಡಿ, ಬೆಂಗಳೂರು - ೫೬೦ ೦೦೪

ಅಧ್ಯಕ್ಷರ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಯೋಜನೆಗಳಲ್ಲಿ ರಾಜ್ಯದ ಹಿರಿಯ ಕಲಾವಿದರನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸುವುದು ಒಂದು.

ಈಗ ಪ್ರಕಟವಾಗುತ್ತಿರುವ ಈ ಪುಸ್ತಕವು ಅ. ನ. ಸುಬ್ಬರಾವ್ ಅವರನ್ನು ಕುರಿತದ್ದಾಗಿದೆ. ಈ ಪುಸ್ತಕವು ಇಷ್ಟು ತಡವಾಗಿ ಬರುತ್ತಿರುವುದಕ್ಕೆ ಕಾರಣ ಶ್ರೀ ಅ. ನ. ಸುಬ್ಬರಾವ್ ಅವರ ಪುಸ್ತಕವನ್ನು ಬರೆಯುವವರಿಗೆ ನಿಖರವಾದ ಮಾಹಿತಿ ದೊರೆಯದೆ ಇರುವುದೋ? ಅಥವಾ ಅವರ ಬಹುಮುಖ ಹೋರಾಟವನ್ನು ಸೆರೆ ಹಿಡಿಯುವುದು ಕಷ್ಟವೊ ತಿಳಿಯದು.

ಈ ಹಿರಿಯ ಕಲಾಚಿಂತಕ, ಸಾಮಾಜಿಕ ಕಳಕಳಿಯ ಶ್ರೀ ಅ. ನ. ಸುಬ್ಬರಾವ್ ಅವರು ಚಿತ್ರಕಲೆ, ನಾಟಕ, ಪತ್ರಿಕೋದ್ಯಮ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ದುಡಿದವರು. ಇವರ ಬಗ್ಗೆ ಬರೆದು ಕೊಡಲು ಮಿತ್ರರಾದ ಶ್ರೀ ಹರಿಹರಪ್ರಿಯ ಅವರು ಒಪ್ಪಿದ್ದು ನಿಜಕ್ಕೂ ಸಂತಸ ತಂದಿದೆ.

ಶ್ರೀ ಹರಿಹರಪ್ರಿಯ ಅವರು ಮೊದಲಿನಿಂದಲೂ ಹರಿತವಾಗಿ ಬರೆಯುವ ಮತ್ತು ಮೊನಚು ಮಾತಾಡುವವರು. ಶ್ರೀ ಅ. ನ. ಸುಬ್ಬರಾವ್ ಅವರ ಬಗ್ಗೆಯೂ ಅಷ್ಟೇ ಹರಿತವಾಗಿ ಅನೇಕ ದೃಷ್ಟಿಕೋನಗಳಿಂದ ವಿಶಿಷ್ಟ ರೀತಿಯಲ್ಲಿ ಬರೆದುಕೊಟ್ಟಿದ್ದಕ್ಕೆ ಧನ್ಯವಾದಗಳು. ಅನೇಕ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ

ಶ್ರೀ ಅ. ನ. ಸುಬ್ಬರಾವ್ ಅವರ ಪುಸ್ತಕಕ್ಕೆ ಮೂಲ ದ್ರವ್ಯಗಳನ್ನು ಒದಗಿಸಿಕೊಟ್ಟ ಶ್ರೀ ಎ. ಎಸ್. ಮೂರ್ತಿ ಮತ್ತು ಶ್ರೀ ಎ. ಎಂ. ಪ್ರಕಾಶ್ ಅವರಿಗೆ ಹಾಗೂ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಸಹಕರಿಸಿದ ಎಲ್ಲರಿಗೂ ವಂದನೆಗಳು.

ಈ ಪುಸ್ತಕವನ್ನೂ ಅಂದವಾಗಿ ಮುದ್ರಿಸಿಕೊಟ್ಟ ಲಿಪಿ ಮುದ್ರಣದ ಶ್ರೀ ಬಾ.ಕಿ.ನ. ಅವರಿಗೂ ಮತ್ತು ಎಂದಿನಂತೆ ನಮ್ಮ ಪ್ರಕಟಣೆಗಳನ್ನು ಕೊಂಡು ಓದುವ ಕಲಾಭಿಮಾನಿಗಳನ್ನು ನೆನೆಯುತ್ತೇನೆ.

ಸಿ. ಚಂದ್ರಶೇಖರ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು

ಮುನ್ನುಡಿ

ಇಂತಹುದೊಂದು ಪುಸ್ತಕ ಬರೆಯುತ್ತೇನೆ ಅಂದುಕೊಂಡಿರಲಿಲ್ಲ. ಈಗಿನ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಸಿ. ಚಂದ್ರಶೇಖರ್ ಪ್ರೀತಿವಿಶ್ವಾಸಗಳಿಗೆ ಕಟ್ಟುಬಿದ್ದು ಈ ಕೆಲಸ ಕೈಗೊಂಡಿದ್ದೇನೆ. ನಾವಿಬ್ಬರೂ ಸಾಂಸ್ಕೃತಿಕ ಲೋಕದಲ್ಲಿ ಜೊತೆಯಾಗಿಯೇ ಬೆಳೆದವರು. ಹಗಲು ಇರುಳು ಕನ್ನಡ ತೆಲುಗು ಕಾವ್ಯಗಳನ್ನು ಓದಿದವರು. ನಾಡಿನ ಕಲೆ ಸಂಸ್ಕೃತಿ ಸಾಮಾಜಿಕ ಜೀವನ ಕುರಿತು ಚರ್ಚಿಸಿಕೊಂಡವರು. ಪರಸ್ಪರ ಪ್ರಭಾವಕ್ಕೆ ಒಳಗಾದವರು. ಈ ಹಿನ್ನೆಲೆ, ಇಂತಹ ಕೆಲಸವೊಂದನ್ನು ಸಾಧ್ಯವಾಗಿಸಿದೆ. ಈವರೆಗೆ, ಯಾವ ಅಕಾಡೆಮಿ ಇತ್ಯಾದಿಗಳಿಗೆ ಏನೊಂದು ಬರೆದುಕೊಟ್ಟವ ನಾನಲ್ಲ.


ಇನ್ನು ಅ. ನ. ಸುಬ್ಬರಾವ್ (ಅನಸು) ಅವರನ್ನು ಕೊನೆಗಾಲದ ಸುಮಾರು ೧೨ ವರ್ಷಗಳು ಹತ್ತಿರದಿಂದಲೆ ಬಲ್ಲವ ನಾನು. ಕೆಲವೊಂದು ಸಂದರ್ಭದಲ್ಲಿ ನಾನು ಕಾರ್ಯೋನ್ಮುಖನಾಗಲು ಉತ್ತೇಜನ ನೀಡಿದ ಹಿರಿಯರು ಅವರು. ಅವರ ಮಗ ಎ. ಎಸ್. ಮೂರ್ತಿಯವರು, ಸುಮಾರು ಮೂವತ್ತು ವರ್ಷಗಳ ಸ್ನೇಹಿತರು. ಈ ಸಂದರ್ಭದಲ್ಲಿ ಸಹಜವಾಗಿ ಸಹಕರಿಸಿದ್ದಾರೆ. ಮೂರ್ತಿಯವರ ಮಗ. "ಕಲಾಮಂದಿರ"ದ ಈಗಿನ ಪ್ರಾಚಾರ್ಯ. ಕಿರಿಯ ಸ್ನೇಹಿತ ಎ. ಎಂ. ಪ್ರಕಾಶ್, ಬೇಕಾದ ಪರಿಕರಗಳನ್ನು ಒದಗಿಸಿದ್ದಾರೆ. ಇನ್ನೊಬ್ಬ ಕಿರಿಯ ಸ್ನೇಹಿತ ಸಿ. ಆರ್. ವೆಂಕಟೇಶ್ ಪುಸ್ತಕಕ್ಕೆ ಬೇಕಾದ ಚಿತ್ರಗಳನ್ನು ತೆಗೆದುಕೊಟ್ಟಿದ್ದಾರೆ. ಗೆಳೆಯ "ಲಿಪಿ" ಬಾಕಿನ ಚಂದವಾಗಿ ಮುದ್ರಿಸಿದ್ದಾರೆ. ಮಿತ್ರರಾದ ರಿಜಿಸ್ಟ್ರಾರ್ ಎಚ್. ಶಂಕರಪ್ಪನವರ ಒತ್ತಾಸೆ ಸಿಕ್ಕಿದೆ. ಈ ಎಲ್ಲಕ್ಕೂ ಕಾರಣರಾದವರು ಕರ್ನಾಟಕ ಲಲಿತ ಕಲಾ ಅಕಾಡೆಮಿ.

ಇವರಿಗೆ, ಇವರೆಲ್ಲರ ನೆರವಿನಿಂದ ರೂಪಿತಗೊಂಡ ಈ ಕೃತಿಯನ್ನು ಓದಿ, ಚರ್ಚಿಸುವ ನಿಮಗೆ ಅನಂತ ವಂದನೆಗಳು.


"ಪುಸ್ತಕ ಮನೆ" - ***ಹರಿಹರಪ್ರಿಯ***

೫೧, ಬನಗಿರಿನಗರ,
ಬನಶಂಕರಿ ೩ನೇ ಹಂತ,
ಬೆಂಗಳೂರು ೫೬೦೦೮೫


ವಿಷಯಸೂಚಿ



ಇಳಿವಯಸ್ಸಿನ ಅ. ನ. ಸು



ಕೃತಿಯ ರಚನೆಯಲ್ಲಿ ಕಲಾವಿದ ಅ. ನ. ಸು



ಕಲಾವಿದ ಇನಾಮತಿ, ಕುಕ್ಕೆ, ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್
ಅವರೊಂದಿಗೆ ಅ. ನ. ಸುಬ್ಬರಾವ್




ಕಲಾಮಂದಿರದಲ್ಲಿ ಕಲಾವಿದ್ಯಾರ್ಥಿಗಳು



ಆ. ನ. ಸು. ಚಿತ್ರಿಸಿದ "ಗುಬ್ಬಿ ವೀರಣ್ಣ"



ಕಲಾವಿದ್ಯಾರ್ಥಿಗಳೊಂದಿಗೆ ಅ. ನ. ಸು



ಅ. ನ. ಸು. ಸಂಪಾದಕತ್ವ ಮತ್ತು ಮಾಲೀಕತ್ವದ
'ಕಲಾ' ಸಂಚಿಕೆಯ ಒಂದು ಮುಖಪುಟ ವಿನ್ಯಾಸ



ಕಲಾಮಂದಿರದಲ್ಲಿ ಸಂಗೀತಗೋಷ್ಠಿ ಅ. ನ. ಸು. ಹಾಗೂ ಜಿ. ಚೆನ್ನಮ್ಮ

ಕಲಾಶಿಕ್ಷಕ

ಹುಟ್ಟಿನಿಂದಲೂ ಕಲಿಯಬೇಕು ಎಂಬ ಆಸೆ ಹೊತ್ತ ಎ. ಎನ್. ಸುಬ್ಬರಾವ್ (ಅಕ್ಕಿಹೆಬ್ಬಾಳು ನರಸಿಂಹಯ್ಯ ಸುಬ್ಬರಾವ್) ಅವರಿಗೆ. ಎಳೆತನದಲ್ಲಿಯೇ ತಂದೆ ತೀರಿಕೊಂಡದ್ದು ದೊಡ್ಡ ಆಘಾತ. ಜೊತೆಗೆ ಬಡತನ. ತಾಯಿ ವೆಂಕಮ್ಮನವರ ನಾಗಮಂಗಲದಲ್ಲಿ ಮಾಧ್ಯಮಿಕ ಶಾಲೆ ಓದುವಾಗ. ಹೊಯ್ಸಳರ ಕಾಲದ ದೇವಸ್ಥಾನಗಳ ಆಕರ್ಷಣೆ. ಹಾಗೂ ಬೀದಿಯ ತುಂಬ ವಿಶ್ವಕರ್ಮ ವಂಶಸ್ಥರ ಶಿಲ್ಪ ಕಲಾ ಕುಶಲತೆಯ ವಾತಾವರಣ. ಆದರೆ ಕಲಿಯಬೇಕು ಎಂಬ ಹೊಯ್ಸಳ ಕರ್ನಾಟಕ ಬ್ರಾಹ್ಮಣ ಹುಡುಗ ಅನಸುಗೆ, ಜಾತಿಮತಧರ್ಮ ಸಂಪ್ರದಾಯಗಳ ಅಡ್ಡಗೋಡೆ.

ಇಂಥ ಒತ್ತಡದಲ್ಲಿ. ಹೆಚ್ಚು ಓದಿನ ಆಸೆ ತೊರೆದು. ಹಳ್ಳಿಯಲ್ಲಿ ಮೂರು ವರ್ಷ ಶಿಕ್ಷಕನಾಗಿ, ತೋಟಗಾರಿಕೆ ವ್ಯವಸಾಯ ವ್ಯಾಪಾರಗಳಲ್ಲಿಯೂ ತೊಡಗಬೇಕಾಯಿತು. ಆನಂತರ ಕೇವಲ ೧೦ ತಿಂಗಳ ಶಿಕ್ಷಕ ತರಬೇತಿ ಪಡೆದು. ಉದ್ಯೋಗ ಹಿಡಿಯುವ ಕನಸು. ಮೈಸೂರಿನತ್ತ ಭವಿಷ್ಯ ಅರಸಿ ಹೆಜ್ಜೆ. ಬಂಧು ಬಳಗವಿಲ್ಲದ ಊರಿನಲ್ಲಿ. ಊಟ ವಸತಿ ಶಾಲೆಗೆ ಶುಲ್ಕ ತುಂಬಲು ಆರ್ಥಿಕ ಅಭಾವ. ಹಾಸ್ಯ ಮಾಡಿದ ಜನವೇ ಆಶ್ರಯದಾತರಾಗಿ ನಿಂತ ಪ್ರಸಂಗ. ನಾರ್ಮಲ್ ಸ್ಕೂಲಿನಲ್ಲಿ ಹೆಸರಾಂತ ತತ್ವಶಾಸ್ತ್ರಜ್ಞ, ಸೌಂದರ್ಯ ಮೀಮಾಂಸಕ ಎಂ. ಹಿರಿಯಣ್ಣನವರೆ ಪ್ರಾಚಾರ್ಯರು. ಅವರ ಮಾರ್ಗದರ್ಶನವೆ ಅನಸುಗೆ ಜೀವಮಾನ ಪರ್ಯಂತ ಧ್ಯೇಯದೀಪ.

ಆ ಸಂದರ್ಭದಲ್ಲಿ. ಇತರ ಅನೇಕ ವಿಷಯಗಳ ಜೊತೆಗೆ ಚಿತ್ರಕಲೆಯನ್ನೂ ಕಲಿಯಲು ಸುವ್ಯವಸ್ಥೆ. ಎಂ. ಜಗದೀಶನ್ ಎಂಬ

ಕಲಾ ಶಿಕ್ಷಕರ ಪ್ರೋತ್ಸಾಹ. ೧೦ ತಿಂಗಳು ಹೋಗಿ ೩ ವರ್ಷಗಳ ಕಲಿಕೆ. ಜೊತೆಯಲ್ಲಿಯೆ ಮದರಾಸು ಸರಕಾರ ನಡೆಸುತ್ತಿದ್ದ ಕಲಾ ಸಂಬಂಧವಾದ ನಾನಾ ಪರೀಕ್ಷೆಗಳಲ್ಲಿಯೂ ಉತ್ತೀರ್ಣತೆ. ಆಗ್ಗೆ ನಾರ್ಮಲ್ ಸ್ಕೂಲ್ ಇದ್ದದ್ದು ಟ್ರೈನಿಂಗ್ ಕಾಲೇಜ್ ಆಗಿ ಪರಿವರ್ತನೆ. ಆ ಹೊತ್ತಿಗೆ ಟ್ರೈನಿಂಗ್ ಪರೀಕ್ಷೆಯಲ್ಲಿ ಅನಸು ಉತ್ತೀರ್ಣರಾಗಿದ್ದರಿಂದ, ಕಾಲೇಜಿಗೆ ಸೇರಿದ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿ ಶಿಕ್ಷಕ ಉದ್ಯೋಗ ದೊರೆಯಿತು. ಹಾಗೆಯೆ ವಯಸ್ಕರಾದ ಶಿಕ್ಷಕರ ತರಗತಿಗೂ ಕಲಾಶಿಕ್ಷಣ ನೀಡುವ ಅವಕಾಶ ಒದಗಿಬಂದಿತು. ಆ ಕಾಲಕ್ಕೆ, ಚಿತ್ರಕಲೆ ಜೊತೆಗೆ, ಮಣ್ಣಿನ ಮೂರ್ತಿಕಲೆ ರಿಲೀಫ್‌ಮ್ಯಾಪ್ ಮಾಡಲಿಂಗ್ ಕಾರ್ಯವನ್ನು ಅನಸು ಮಾಡುತ್ತಿದ್ದುದನ್ನು ಗಮನಿಸಿದ ಪ್ರಾಚಾರ್ಯ ಸಿ. ಆರ್. ನಾರಾಯಣರಾವ್ ಸಂತೋಷಪಟ್ಟು, ಆ ಕಾರ್ಯವನ್ನು ತಮ್ಮ ಕಛೇರಿಯಲ್ಲಿಯೆ ಮಾಡಲು ಅನುವು ಕೂಡ ಮಾಡಿಕೊಟ್ಟರು. ಇಂದರಿಂದಾಗಿ, ಅನಸು ಮಾಡಿದ ದಕ್ಷಿಣ ಭಾರತದ ರಿಲೀಫ್ ಮ್ಯಾಪಿಗೆ ದಸರ ಪ್ರದರ್ಶನದಲ್ಲಿ ರಜತ ಪದಕ ಬಹುಮಾನ ಲಭಿಸಿತು. ಈ ಎಲ್ಲದರ ಪರಿಣಾಮ, "ಪುಷ್ಪರಚನೆ" ಹಾಗೂ "ಮಕ್ಕಳ ತಿದ್ದುವಿಕೆ" ಎಂಬ ಎರಡು ಪುಸ್ತಕಗಳನ್ನು ಅನಸು ಪ್ರಕಟಿಸುವವರಾದರು.

ಆಗಲೇ ನಡೆದಂತಹ ಅರ್ಥಸಾಧನ ಎಂಬ ಸಮ್ಮೇಳನದಲ್ಲಿ ಭಾಷಣ ಮಾಡಲು ಅನಸುಗೆ ಅವಕಾಶ ದೊರಕಿತು. ಭಾಷಣದ ಪರಿಣಾಮದಿಂದ ವರ್ಧಮಾನಯ್ಯ ಎಂಬ ಶ್ರೀಮಂತರ ಸ್ನೇಹವಾಯಿತು. ಅವರ ಮೂಲಕವೇ ಬೆಂಗಳೂರಿನಲ್ಲಿದ್ದ ಆಧುನಿಕ ಮೈಸೂರಿನ ಶಿಲ್ಪಿ ಎಂ. ವಿಶ್ವೇಶ್ವರಯ್ಯ ಅವರ ಭೇಟಿಯ ಭಾಗ್ಯ ಒದಗಿಬಂದಿತು. ಅವರ ಸೂಚನೆಯಂತೆ, ಕಂಟ್ರೋಲರ್ ಚಕ್ರವರ್ತಿಯವರ ಭೇಟಿಯಾಗಿ, ತಮ್ಮ ಮನೋಭಾವವನ್ನು ವ್ಯಕ್ತಪಡಿಸಲು ಅನಸುಗೆ ಸಾಧ್ಯವಾಯಿತು.

ಹೀಗೆ ಬೆಂಗಳೂರಿನ ಪಯಣದಿಂದ ಹಿಂದಿರುಗಿದ ಕೆಲವೇ ವಾರಗಳಲ್ಲಿ, ಬೆಂಗಳೂರು ಸ್ತ್ರೀ ಸಮಾಜದಲ್ಲಿ ಆರಂಭವಾಗಿದ್ದ ಕುಶಲ ಕಲಾ ವಿಭಾಗದ

ಕಲಾಶಿಕ್ಷಕರಾಗಿ ಅನಸುಗೆ ಆದೇಶ ಬಂದಿತು. ಅಲ್ಲಿಗೆ ೧೫ರೂ ಇದ್ದ ಸಂಬಳ ೬೦ ರೂ ಆಯಿತು. ಆರ್. ಕಲ್ಯಾಣಮ್ಮನವರ ನೇತೃತ್ವದಲ್ಲಿನ ಶಾರದಾ ಸ್ತ್ರೀ ಸಮಾಜದ ಕಾರ್ಯ. ಮಹಿಳೆಯರ ಆದರಕ್ಕೆ ಪಾತ್ರವಾಯಿತು. ನೂರಾರು ಜನರು. ನಾನಾ ಕುಶಲ ಕಲೆಗಳಲ್ಲಿ ಆಸಕ್ತಿ ವಹಿಸಿ ಕೆಲಸ ಕಲಿಯುತ್ತ ಬಂದರು. ಮಹಿಳೆಯರು ಕುಶಲ ಕಲೆಗಳಲ್ಲಿ ಚಿತ್ರಕಲೆಯಲ್ಲಿ ತೋರಿದ ಆಸಕ್ತಿ ಅಭಿರುಚಿ ಚಾತುರ್ಯ ಹೆಮ್ಮೆ ಪಡುವಂತಹುದು ಎಂಬ ನಿಲವು ಅನಸುದಾಯಿತು. ಹಾಗೆಯೇ. ನಮ್ಮ ಮಹಿಳೆಯರಿಗೆ ತಕ್ಕ ಸೌಲಭ್ಯ ಒದಗಿ. ಅಗತ್ಯ ತಾಂತ್ರಿಕ ವಿಧಾನ ತಿಳಿಸಿದರೆ. ಅಸದೃಶ ಕಲಾಕೃತಿಗಳನ್ನು ನಿರ್ಮಿಸಬಲ್ಲರು ಎಂಬುದನ್ನು ಅನಸು ಅಂದೇ ಗ್ರಹಿಸಿದರು. ಇಷ್ಟಾಗಿ ಆ ತರಗತಿ ನಡೆದದ್ದು ಕೇವಲ ಆರು ತಿಂಗಳು.

ಈ ಅತ್ಯಲ್ಪ ಕಾಲದಲ್ಲಿಯೆ ನಾನಾ ಅಡಚಣೆಗಳು ಒದಗಿ ಉತ್ಸಾಹ ಕುಗ್ಗಿತು ಎಂಬ ನಿಗೂಢ ವಾಕ್ಯವೊಂದನ್ನು ಅನಸು ಒಂದು ಕಡೆ ದಾಖಲಿಸಿದ್ದಾರೆ. ಅಷ್ಟರಲ್ಲಿ ಚಿಕ್ಕಮಗಳೂರು ಪ್ರೌಢಶಾಲೆಗ ಕಲಾಶಿಕ್ಷಕರಾಗಿ ಉದ್ಯೋಗ ಸಿಕ್ಕು. ಅಲ್ಲಿಗೆ ಹೋಗ ಬೇಕಾಗಿ ಬಂದಿತು. ಅಲ್ಲಿಯ ಅನುಭವವೇ ಅನಸು ಬದಲಾಗಲು ಕಾರಣವೂ ಆಯಿತು :

"ಅಂದು ಹೈಸ್ಕೂಲಿನ ಡ್ರಾಯಿಂಗ್ ಪಾಠ ಹೆಸರಿಗೆ ಮಾತ್ರ. ಚಿತ್ರ ಪಾಠದಲ್ಲಿ ಆಡಳಿತಗಾರರಿಗೂ ವಿದ್ಯಾರ್ಥಿಗಳಿಗೂ ಆಸಕ್ತಿಯಿಲ್ಲ. ಆದರೆ ಉಪಾಧ್ಯಾಯರ ಸಂಬಳ ಸಲೀಸಾಗಿ ಬರುತ್ತಿತ್ತು. ಡ್ರಾಯಿಂಗ್ ಪರೀಕ್ಷಾ ವಿಷಯವಲ್ಲ. ಕಲಾಧ್ಯಾಪಕನಾಗಿ ನಾನು ಸಾಧಿಸಬೇಕೆಂದಿದ್ದ ಆಸೆ ಕನಸಾಗಿಯೇ ಉಳಿಯಿತು. ಈ ಉದ್ಯೋಗ ಸಾಕೆನಿಸಿ ಒಂದು ವರ್ಷದ ಒಳಗಾಗಿಯೇ ರಜ ಪಡೆದು ಮೈಸೂರಿಗೆ ಹಿಂತಿರುಗಿದೆ. ಅಲ್ಲಿ ನನಗೆ ಪ್ರಿಯವೆನಿಸಿದ್ದ ಅಂಶಗಳು ಅನೇಕ. ಬಂದ ಕೂಡಲೆ ಚಾಮರಾಜೇಂದ್ರ ಕಲಾಶಾಲೆ ಸೇರಿ. ಮದರಾಸಿನ ಕಲಾ ವಿಭಾಗದ ಪ್ರೌಢ ಪರೀಕ್ಷೆಗಳಲ್ಲಿ ಉತ್ತೀರ್ಣನಾದೆ. ನಂತರ

ಕೆಲಕಾಲ ಮದರಾಸಿನ ಕಲಾಶಾಲೆಯಲ್ಲಿ ವ್ಯಾಸಂಗ ಮಾಡಿ ಬಂದೆ. ಈ ಅವಧಿಯಲ್ಲಿಯೇ ಸ್ವತಂತ್ರ ಕಾರ್ಯಾಲಯವಾರಂಭಿಸುವ ಆಲೋಚನೆ ಮನದಲ್ಲಿ ಮೂಡಿತು. ಸರ್ ಎಂ. ವಿ. ಯವರನ್ನು ಭೇಟಿಮಾಡಿ ಸಲಹೆ ಕೇಳಿದಾಗ, ಸರಕಾರೀ ಉದ್ಯೋಗಕ್ಕೆ ರಾಜೀನಾಮೆಯಿತ್ತು ಸ್ವತಂತ್ರ ಸಂಸ್ಥೆಯನ್ನಾರಂಭಿಸಲು ಸಲಹೆ ಮಾಡಿದರು. ಇದೇ ಕಲಾಮಂದಿರದಿಂದ ಸ್ಥಾಪನೆಗೆ ಅಂಕುರಾರ್ಪಣವಾಯಿತು."[೧]

ಹೀಗೆ ಬದುಕಿಗಾಗಿ ಶಿಕ್ಷಕ ತರಬೇತಿ ಪಡೆಯಲು ಬಂದು, ಹೆಚ್ಚಿನ ಕಲಾಶಿಕ್ಷಣ ಪಡೆದು, ಸ್ವತಂತ್ರ ಜೀವನ ವೃತ್ತಿಯನ್ನೇ ಪ್ರಾರಂಭಿಸುವ ಹಂತಕ್ಕೆ ಅನಸು ತಲಪಿದರು. ೧೯೧೯ ಆಗಸ್ಟ್ ೧೨, ಬೆಂಗಳೂರಿನ ಬಳೇಪೇಟೆ ಸುಗ್ರೀವನ ಗುಡಿಯ ಪಕ್ಕದ ಮಳಿಗೆಯೊಂದರಲ್ಲಿ, "ಸ್ವಾತಂತ್ರ್ಯವೇ ಸ್ವರ್ಗ, ಸ್ವಾವಲಂಬನೆಯೇ ಸ್ವಾತಂತ್ರ್ಯದ ಹಾದಿ" ಎಂಬ ಆದರ್ಶನೆಲೆಯಲ್ಲಿ ಅನಸು, ಸ್ವಯಂ ವೃತ್ತಿ ಶಿಕ್ಷಣದ ಕಲಾಮಂದಿರವನ್ನು ಪ್ರಾರಂಭಿಸಿದರು.

ಆಗ್ಗೆ ಮೈಸೂರಿನಲ್ಲಿದ್ದ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ (೧೯೧೩) ಒಂದೇ ಕರ್ನಾಟಕದಲ್ಲಿದ್ದ ಕಲಾಶಾಲೆ. ಅಷ್ಟೇಕೆ ಸಾಂಸ್ಕೃತಿಕವಾಗಿ ನೋಡಿದರೂ, ಸೆಂಟ್ರಲ್ ಕಾಲೇಜಿನಲ್ಲಿ ಮೊಟ್ಟ ಮೊದಲ ಕರ್ಣಾಟಕ ಸಂಘವನ್ನು ಎ. ಆರ್. ಕೃಷ್ಣಶಾಸ್ತ್ರಿಯವರು ಟಿ. ಎಸ್. ವೆಂಕಣ್ಣಯ್ಯನವರು ಆರಂಭಿಸಿದ್ದು ೧೯೧೮ರಲ್ಲಿ. ಕರ್ನಾಟಕದಲ್ಲಿರಲಿ, ಭಾರತದಲ್ಲಿಯೇ ಪರಿಸ್ಥಿತಿ ಹೇಗಿತ್ತು ಎಂದರೆ, ರವೀಂದ್ರನಾಥ ಟಾಗೋರರು ತಮ್ಮ ಶಾಂತಿನಿಕೇತನದಲ್ಲಿ ಕಲಾವಿಭಾಗ ತೆರೆದಿದ್ದು ೧೯೧೯ರಲ್ಲಿ. ಈ ಸಾಲಿನಲ್ಲಿ ಹೆಮ್ಮೆಯಿಂದ ತಲೆಎತ್ತಿನಿಂತದ್ದೇ ಅನಸು ಏಕವ್ಯಕ್ತಿ ಶಿಕ್ಷಕ ಕುಶಲ ಕಲಾಮಂದಿರ.

೧. ಕಲಾನಿವೇದನ, ಸಂ: ಅ. ನ. ಸುಬ್ಬರಾವ್ ಮತ್ತು ಬಿ. ಅಶ್ವತ್ಥನಾರಾಯಣರಾವ್, ಪುಟ ೯೭, ೧೯೬೯

"ಮೈಸೂರು ಮಹಾರಾಜರು ಕಲಾವಿದರಿಗೆ ಉತ್ತೇಜನವೀಯುತ್ತಿದ್ದುದು ನಿಜ. ಆದರೆ ಆ ಉತ್ತೇಜನ ಕೇವಲ ಕೆಲವು ಪ್ರಬುದ್ಧ ಕಲಾವಿದರಿಗೆ ಮೀಸಲು - ಇತರರಿಗೆ ಯಾವ ಬಗೆಯ ನೆರವೂ ಇಲ್ಲ. ಇನ್ನು ಶಾಲಾ ಶಿಕ್ಷಣ ಕ್ರಮದಲ್ಲಿ ಚಿತ್ರಾಭ್ಯಾಸಕ್ಕೆ ಅವಕಾಶವಿದ್ದರೂ ಅದು ಅರ್ಥಶೂನ್ಯ. ಚಿತ್ರ ಪಾಠದ ವೇಳೆ ಹುಡುಗಾಟಿಕೆಯ ಕಾಲ. ಕಲೆಯನ್ನೇ ಪ್ರಧಾನವಾಗಿ ವ್ಯಾಸಂಗ ಮಾಡಲು ಕಲಾ ಶಾಲೆಗಳ ಅಭಾವ. ಕಲಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಆಶಿಸುವವರು ಮದರಾಸು ಪರೀಕ್ಷೆಗಳಿಗೆ ಕೂಡಬೇಕು. ಅದಕ್ಕೆ ಇದ್ದ ಒಂದೇ ಒಂದು ಸೌಕರ್ಯವೆಂದರೆ ಕಂಟೋನ್ಮೆಂಟಿನಲ್ಲಿನ ಆರ್. ಬಿ. ಎನ್. ಎಂ. ಹೈಸ್ಕೂಲು ಒಂದು ಪರೀಕ್ಷಾ ಕೇಂದ್ರ. ಇಂತಹ ಸನ್ನಿವೇಶದಲ್ಲಿ ತರುಣರಿಗೆ ಕಲಾ ಶಿಕ್ಷಣದ ಏರ್ಪಾಡು ಮಾಡಿದ ಪ್ರಪ್ರಥಮ ಕಲಾ ಶಾಲೆ ಮಂದಿರ."[೨]

ಆದರೂ ಮೊದಲಿಗೆ ಕಲಾಮಂದಿರ ಪ್ರಾರಂಭವಾದದ್ದೇ ಒಂದು ಉದ್ಯೋಗ ಮಳಿಗೆಯಾಗಿ. ಬಣ್ಣದ ಬೋರ್ಡು, ರೂಪುಚಿತ್ರ ತಯಾರಿಕೆ; ಕುರ್ಚಿ ಬೆಂಚು ತಯಾರಿಕೆ - ಜನರ ಕುತೂಹಲ ಕೆರಳಿಸಿತ್ತು. ಇವೆಲ್ಲ ಬೆಂಗಳೂರಿಗೆ ಹೊಚ್ಚ ಹೊಸತು. ನೋಡಲು ಬಂದ ಹೆಚ್ಚು ಜನರಲ್ಲಿ ತಾವೂ ಈ ಬಗೆ ಚಿತ್ರ ರಚನೆ ಕಲಿಯಬೇಕೆಂಬ ತರುಣರ ಸಂಖ್ಯೆ ಕಡಿಮೆ ಏನೂ ಇರಲಿಲ್ಲ. ಅವರಿಂದ ಕಲಾವ್ಯಾಸಂಗಕ್ಕೆ ಪ್ರಾರ್ಥನೆ ಬಂದಾಗ, ವ್ಯವಸ್ಥಾಪಕ ಅನಸು ಒಪ್ಪಲೇಬೇಕಾಯಿತು. ಈ ಒತ್ತಾಸೆಯಿಂದ ಕಲಾಶಿಕ್ಷಣ ವಿಭಾಗ ತೆರೆದು, ೪ ಮಂದಿಯಿಂದ ಶುರುವಾಗಿ, ವರ್ಷಾಂತ್ಯಕ್ಕೆ ೧೮ಕ್ಕೆ ಸಂಖ್ಯೆ ಏರಿತ್ತು. ಇದು ಮುಂದೆ ಕ್ರಮಕ್ರಮವಾಗಿ ಏರುತ್ತಾ ಹೋಯಿತು.

---

೨. ಅದೇ, ಪುಟ ೧೫೨

ಒಮ್ಮೆ ವಿಶ್ವವಿದ್ಯಾನಿಲಯದ ಅಧ್ಯಕ್ಷರ ಬಳಿಗೆ ಹೋಗಿ, "ಮಕ್ಕಳ ತಿದ್ದುವಿಕೆ" ಎಂಬ ತಮ್ಮ ಪುಸ್ತಕದ ಗೌರವ ಪ್ರತಿಯನ್ನು ಅನಸು ನೀಡಿದರು. ಆ ದೊಡ್ಡ ಮನುಷ್ಯ, ಅನಸು ಅವರನ್ನು ನೋಡಿ 'ನಿನಗೆಷ್ಟು ಮಕ್ಕಳು ?' ಎಂದರು. ಆಗ್ಗೆ ಮದುವೆಯಾಗಿ ಕೆಲವೇ ಕೆಲವು ತಿಂಗಳಾಗಿದ್ದ ಅನಸು, "ಮುವ್ವತ್ತು ಮಂದಿ" ಎಂದರು.

ಈ ಪ್ರಶ್ನೆ ಮತ್ತು ಉತ್ತರ ಅನಸು ಅವರನ್ನು ಸದಾ ಕಾಡಿದೆ : "ನಿಜವಾಗಿಯೂ ನನ್ನ ವಿದ್ಯಾರ್ಥಿಗಳನ್ನು ನಾನು ಮಕ್ಕಳಂತೆ ಲಾಲಿಸಿರುವೇನೆ ? ನನಗಿದ್ದ ಶೃಂಖಲ ಬಂಧನಗಳಲ್ಲಿ ಮಗುವಿನ ಸಹಜ ಗುಣಗಳನ್ನು ತಿಳಿಯುವುದು ಸಾಧ್ಯವಿದ್ದಿತೆ ? ಎಂಬ ಪ್ರಶ್ನೆಯು ಆಗಾಗ ಎದ್ದು ನಿಲ್ಲುತ್ತಿದ್ದಿತು. ಇಲ್ಲ ! ಎಂದಿಗೂ ಇಲ್ಲ ! ಶಾಲೆಗಳಲ್ಲಿ ಉಪಾಧ್ಯಾಯರಿಗೆ ಸ್ವಾತಂತ್ರ್ಯವಿಲ್ಲ ! ಮಕ್ಕಳಿಗೆ ಮೊದಲೇ ಇಲ್ಲ ! ಸವೆದ ಗಾಡಿಯ ಜಾಡಿನಲ್ಲಿ ಉರುಳುತ್ತಿರುವ ಚಕ್ರದಂತೆ, ಹಿಂದಿನವರು ಮಾಡಿಟ್ಟ ಹಾದಿ ಹಿಡಿದು, ನಡೆಯ ಬೇಕಲ್ಲದೆ, ಶಾಲಾ ಮಾಸ್ತರನಿಗೆ ಅನ್ಯಥಾ ನಡೆಯಲು ಸಾಧ್ಯವಿಲ್ಲ ! ಅಂದ ಮೇಲೆ ನ ಾನು ಮಕ್ಕಳ ಸ್ವಭಾವವನ್ನು ತಿಳಿಯುವುದೆಂತು ? ಅದಕ್ಕೆ ಪರಿಹಾರ ತಿಳಿಸುವುದಾದರೂ ಹೇಗೆ ?"[೩]

ತಾವು ಬದುಕಿದ್ದ ೯೦ ವರ್ಷಗಳ ಕೊನೆ ಉಸಿರಿನವರೆಗೆ ಈ ದಿಶೆಯಲ್ಲಿಯೇ ಹುಡುಕಾಟ ನಡೆಸಿದ ಹಿರಿಮೆ ಅನಸು ಅವರದು. ತಮ್ಮ ಅನುಭವ, ಆಲೋಚನೆಗಳ ಅವಲೋಕನ ಹಾಗೂ ಭಾಷೆಯ ಜೀವಂತಿಕೆಯಿಂದ ಪುಟಿಯುವ, ಕನ್ನಡ ಕಂಡ ಅತ್ಯುತ್ತಮ ಲಲಿತ ಪ್ರಬಂಧಗಳಲ್ಲಿ ಒಂದಾದ "ಶಿಶುಲೀಲೆ" ಎಂಬ ಲೇಖನದಲ್ಲಿನ ಮಾತುಗಳು ಶಿಕ್ಷಕ ಅನಸು ಮನಸ್ಸಿನ ಪ್ರತಿಬಿಂಬವಾಗಿವೆ :

೩. ಕಲಾ, ಸಂಪುಟ ೧, ಸಂಚಿಕೆ ೮, 'ಶಿಶುಲೀಲೆ', ಪುಟ ೨೦೩-೪, ೧೯೩೦

"ಇವೆಲ್ಲವನ್ನೂ ನೋಡಿ ನನಗನಿಸುವುದು : ಮಕ್ಕಳನ್ನು ಬಂಧಿಸಿರುವ ಕೊಠಡಿಯೊಳಗಿನ ಕೃತಕ ಸನ್ನಿವೇಶದಿಂದ ಅವರನ್ನು ಪಾರುಮಾಡಿ. ಪ್ರಕೃತಿಯ ಸ್ವಚ್ಛಂದ ವಾತಾವರಣದಲ್ಲಿ ಬೆಳೆಯಲು ಅವಕಾಶ ಕಲ್ಪಿಸಬೇಕು. ಉಪಯುಕ್ತವಾದ ಮತ್ತು ನಮ್ಮ ದೇಶಕ್ಕನು ಕೂಲಿಸುವ ಕಸಬು ಕೈಗಾರಿಕೆಗಳಿಗಾಧಾರವಾದ ನಾನಾ ಬಗೆಯ ಆಟಪಾಟಗಳಿಗವಕಾಶ ಕಲ್ಪಿಸಿ. ಮಕ್ಕಳಿಗೆ ಸ್ವಾತಂತ್ರ್ಯವೀಯಬೇಕು..... ನಾನು ಬೇಕೆನ್ನುವುದು. ಸಹಜವಾದ ಶಿಶು ಶಿಕ್ಷಣ ವ್ಯವಸ್ಥೆ ! ಜನಸಾಮಾನ್ಯವನ್ನು ಮುಂದಕ್ಕೆ ಕರೆದೊಯ್ಯುವ ನವೀನ ಕ್ರಮದ ವಿದ್ಯಾನಿಲಯಗಳು. ವಿದ್ಯಾಶೋಧನ ಮಂದಿರಗಳು. ಜನರು ತಾವು ವಂಶ ಪಾರಂಪರ್ಯವಾಗಿ ಆಶ್ರಯಿಸಿ ಬಂದ ವೃತ್ತಿಗಳಲ್ಲಿಯೇ ಪೂರ್ಣ ವಿಕಸಿತ ಪುಷ್ಪಗಳಾಗಿ ಸಂಸಾರ ಯಾತ್ರೆಯನ್ನು ನಡೆಸಲು ಬೇಕಾದ ಸಿದ್ಧತೆಯೊದಗಿಸುವ ಶಾಲೆಗಳು."[೪]

ಅಂತಹ ಶಾಲೆ. ಅಂತಹ ಶಾಲೆಯ ಶಿಕ್ಷಕ ತಾವಾಗಬೇಕೆಂಬುದೇ ತಮ್ಮ ಜೀವನದ ದಾರಿ ಮತ್ತು ಗುರಿಮಾಡಿಕೊಂಡವರು ಅನಸು.

ತಮ್ಮ 'ಜಕಣಾಚಾರಿಯ ಸೋಲು' ಎಂಬ ಕತೆಗಾಗಿ ಬೇಲೂರನ್ನು ಕಂಡಾಗ. ಕರ್ನಾಟಕ ಕಲಾಪದ್ಧತಿಯ ವೈಶಿಷ್ಟ್ಯವನ್ನು ರಕ್ಷಿಸಿಬೆಳೆಸಿಕೊಳ್ಳಲು ಮನಸ್ಸು ಮಾಡಿದ್ದು ಅನಸು. ಕಲಾಮಂದಿರ ಪ್ರಾರಂಭವಾದ ೧೨ನೇ ವರ್ಷಕ್ಕೆ ತಮ್ಮ ವಿದ್ಯಾರ್ಥಿಗಳನ್ನು ಕರೆದುಕೊಂಡು ಕಲಾಯಾತ್ರೆ ಹೊರಟರು. ಹೊರಟಾಗ ಹನ್ನೆರಡು ಮಂದಿ ಇದ್ದು. ಬೇಲೂರು ಸೇರಿದ ಮೇಲೆ ಇಪ್ಪತ್ತು ಮಂದಿಯಾದರು. ಇವರಲ್ಲಿ ಕೆಲವರಿಗೆ ಹೋಗಿ ಬರುವ ಹಣದ ನೆರವನ್ನೂ ಅನಸು ಹೊತ್ತುಕೊಳ್ಳಬೇಕಾಯಿತು. ಅಲ್ಲಿನ ಪರಿಸ್ಥಿತಿ ಪ್ರಾರಂಭಕ್ಕೆ ಹೀಗಿತ್ತು :

---

೪. ಅದೇ, ಪುಟ ೨೦೮

"ನಾವು ಏನು ಅಭ್ಯಾಸ ಮಾಡಬೇಕು, ಯಾವುದನ್ನು ಚಿತ್ರಿಸಬೇಕು, ಯಾರು ಯಾವ ವಿಷಯವನ್ನಾರಿಸಿಕೊಳ್ಳಬೇಕು ? ಎಂಬುದನ್ನು ನಿರ್ಧರಿಸುವುದು ಸುಲಭದ ಕೆಲಸವಾಗಲಿಲ್ಲ. ಪ್ರಾರಂಭದಲ್ಲಿ ಎಲ್ಲರಿಗೂ ಪೂರ್ಣ ಸ್ವಾತಂತ್ರ್ಯ ಕೊಡಲಾಯಿತು. 'ಎಲ್ಲವನ್ನು ಚೆನ್ನಾಗಿ ಪರೀಕ್ಷಿಸಿ ನೋಡಿ ತಮ್ಮ ತಮ್ಮ ಯೋಗ್ಯತೆಗೆ ತಕ್ಕವನ್ನು ಆರಿಸಿಕೊಳ್ಳಬೇಕು. ಆರಿಸಿಕೊಂಡ ಮೇಲೆ ಅದನ್ನು ಸಾಧಿಸಿ ಆದಷ್ಟು ಅಂದವಾಗಿ ಚಿತ್ರಿಸಬೇಕು ಎಂಬ ನಿಶ್ಚಿತ ಮನದಿಂದ ಕಾರ್ಯಕ್ಕಾರಂಭಿಸಿ' ಎಂಬುದೇ ಗುರು ಪದವಿಯ ಉಪದೇಶ. ಈ ವಾಕ್ಯವನ್ನೇ ನಾನೂ ಆದರ್ಶವಾಗಿಟ್ಟುಕೊಂಡೆನು. ನನಗಂತೂ ಕೆಲಸಕ್ಕಾರಂಭಿಸುವಾಗ ಅಧೈರ್ಯವು ಅತಿಯಾಗಿದ್ದಿತು. ಸಾಕಷ್ಟು ಉಪಕರಣವಿಲ್ಲದೆ, ಕೌತುಕದಿಂದ ಬಂದು ಸುತ್ತು ಕಟ್ಟುವ, ಟೀಕೆ ಮಾಡುವ ಜನರ ಗುಂಪಿನ ಮಧ್ಯದಲ್ಲಿ ಶಿಲ್ಪಕಲಾ ಸಾರ್ವಭೌಮರ ಕಾರ್ಯಗಳನ್ನು ಪ್ರತಿಚಿತ್ರಿಸುವುದೆಂದರೆ ನನ್ನಂತಹವನಿಗೆ ಅಧೈರ್ಯವನ್ನೇ ತಂದುಕೊಡುವುದು ! ಒಂದೆರಡು ದಿನಗಳು ಎಲ್ಲರ ಕೆಲಸಗಳೂ ಬಲು ಸಾವಕಾಶವಾಗಿ, ಅಧೈರ್ಯದಿಂದಲೂ, ನಿರುತ್ಸಾಹದಿಂದಲೂ ತುಂಬಿದ್ದಿತೆಂದೇ ಹೇಳಬಹುದು."[೫]

ಹೀಗಿದ್ದು ಮುಂದಿನ ದಿನಗಳ ಪರಿಸ್ಥಿತಿಯೇ ಸಂಪೂರ್ಣ ಬದಲಾಗಿ ಹೋಯಿತು. ಹತ್ತು ವರುಷದ ವೆಂಕಟೇಶ್ ಆಗಲಿ, ತರುಣ ನಂಜುಂಡಪ್ಪ ಆಗಲಿ, ವಕೀಲಿವೃತ್ತಿಯಿಂದ ಕೇವಲ ಐದು ದಿನಗಳು ಮಾತ್ರವೇ ಭಾಗವಹಿಸಿದ್ದ ಶ್ರೀನಿವಾಸರಾಯರಾಗಲಿ - ಇವರನ್ನೆಲ್ಲ ನೋಡಿದ ಪ್ರವಾಸಿಯೊಬ್ಬ, ಅಮೆರಿಕದ ಮಿ॥ ಮಾರ್ಷಲ್ ಅವರು ಹೀಗೆಂದು ಮೆಚ್ಚಿಕೊಳ್ಳುತ್ತಾರೆ :

೫. ಬೇಲೂರು ಬಿಡಾರ ನನ್ನ ಹಂಬಲು, ಕಲಾ, ಸಂಪುಟ ೧, ಸಂಚಿಕೆ ೧೧, ಪುಟ ೩೧೦-೧೧, ೧೯೩೧.

"ನೀವು ಕೈಗೊಂಡ ಕಾರ್ಯವು ಅತ್ಯುತ್ತಮವಾದುದು. ನಿಜವಾಗಿಯೂ ಈ ಬಗೆಯ ಉದ್ಯಮದಿಂದ ಮತ್ತೆ ನಿಮ್ಮ ಕಲೆಯು ಪುನರುಜ್ಜೀವನವಾಗುವುದು."[೬]

ಶಿಬಿರದಲ್ಲಿ ಪಾಲುಗೊಂಡಿದ್ದ ನಾನಾ ವಯಸ್ಸಿನ ವಿವಿಧ ವೃತ್ತಿ ನಿರತ ವಿದ್ಯಾರ್ಥಿಗಳಿಗೆ ಶಿಕ್ಷಕ ಅನಸುಬ್ಬರಾವ್ ಹೆಜ್ಜೆ ಹೆಜ್ಜೆಗೆ ಮಾರ್ಗದರ್ಶನ ಮಾಡುತ್ತಾ ಕೊನೆಗೆ ಹೇಳುತ್ತಾರೆ : "ಈ ಬಗೆಯ ವಿವರಣೆಯಿಂದ ಅಲ್ಲಿ ನನಗೆ ಅನೇಕ ಬಗೆಯ ಆದಿಪಾಠಗಳು ಕಂಡುಬಂದವು."

ಇದು ಶಿಕ್ಷಕನ ನಿಜವಾದ ಗುಣ. ಅನಸು ಅಲ್ಲಿಗೇ ನಿಲ್ಲದೆ. ಕಲಾಶಿಕ್ಷಕರಾಗಿ ಇನ್ನೂ ಒಂದು ಹೆಜ್ಜೆ ಮುಂದೆ ಇಡುತ್ತಾರೆ. ಅಂದರೆ. ಕೇವಲ ಪ್ರತಿಕೃತಿ ಮಾಡುವುದೇ ಅಲ್ಲ. ಅಷ್ಟೂ ದಿನಗಳ ಕಾಲ ನಾಡಿನ ಬಗ್ಗೆ ದೇವಸ್ಥಾನದ ಬಗ್ಗೆ ಕಲೆಯ ಬಗ್ಗೆ ಶಾಸ್ತ್ರ - ಶಾಸನ - ಚರಿತ್ರೆಯ ಬಗ್ಗೆ ಆಲೂರು ವೆಂಕಟರಾಯ, ತಿ. ತಾ. ಶರ್ಮ, ಪಿ. ಆರ್. ರಾಮಯ್ಯ, ಮುತ್ತುಭಟ್ಟ, ಸೂರಪ್ಪ, ಸೀತಾರಾಮಯ್ಯ, ಎ. ಎನ್. ಲಕ್ಷ್ಮೀನಾರಾಯಣ ಅವರನ್ನು ಆಹ್ವಾನಿಸಿ. ಉಪನ್ಯಾಸ - ವಿವರಣೆ ನೀಡುವ ಏರ್ಪಾಟು ಮಾಡಿದ್ದರು. ಊರಿನವರ ಸಹಕಾರದಿಂದ ಹೊತ್ತು ಗೊತ್ತಿಗೆ ವಿದ್ಯಾರ್ಥಿಗಳಿಗೆ ಊಟ ಉಪಚಾರಕ್ಕೆ ಅನುಕೂಲ ಮಾಡಿಕೊಟ್ಟರು. ಬರುವ ಮುಂಚೆ ಒಂದಲ್ಲ ಎಂದು ಬೇಡಿಕೆ ಮೇರೆಗೆ ಎರಡು ದಿನ ತಾವು ಮಾಡಿದ ಪ್ರತಿಕೃತಿಗಳ ಪ್ರದರ್ಶನ ನಡಸಿಕೊಟ್ಟರು. ಅನಸುಬ್ಬರಾಯರು.

ಇದಿಷ್ಟು ಶಿಕ್ಷಕ ಅನಸು ದಾರಿ. ಈ ದಾರಿಯಲ್ಲೇ ಬೆಳೆಸಿದ ಹೂಗಳನ್ನು ಇಷ್ಟೇ ಎಂದು ಪಟ್ಟಿ ಮಾಡಿ ಮುಗಿಸುವುದು ಅಸಾಧ್ಯ. ಎಸ್. ಆರ್. ಸ್ವಾಮಿ. ರುಮಾಲೆ ಚೆನ್ನಬಸವಯ್ಯ. ಶ್ರೀನಿವಾಸರಾವ್

೬. ಅದೇ ಪುಟ ೩೧೧

ಮಧ್ಯಸ್ಥ. ಪಿ. ಎಸ್. ರಾವ್. ಪಿ. ಆರ್. ಕಮಲಮ್ಮ. ಎಂ. ಎಸ್. ಕನಕ. ಕೇಸರಸಿಂಗ್ ಅವರಿಂದ ಹಿಡಿದು. ಬಿ. ಕೆ. ಶ್ರೀನಿವಾಸವರ್ಮ. ವೆಂಕಟಾಚಲಪತಿ ಅವರವರೆಗೆ ಅಸಂಖ್ಯಾತರು.

ಇವರಲ್ಲಿ ಎಷ್ಟೋ ಜನ. ಅನಸುಬ್ಬರಾಯರ ಮನೆಯಲ್ಲಿಯೇ ಗೌರಮ್ಮ ಸುಬ್ಬರಾಯರ ಊಟ ಉಪಚಾರದಲ್ಲಿ ಬೆಳೆದು ದೊಡ್ಡವರಾದರು. ಅವರಲ್ಲಿ ಕೆಲವರು ಕಲಾವಿದರಾದರು. ಕೆಲವರು ಕಲಾ ಸಂಸ್ಥೆಗಳ ವ್ಯವಸ್ಥಾಪಕರಾದರು. ಕೆಲವರು ಕಲಾ ಅಭಿರುಚಿವಂತರಾದರು. ಹೀಗೆ ಕಲೆಯನ್ನು ಜೀವನಕಲೆಯಾಗಿ ಉಳಿಸುವಲ್ಲಿ ಅನಸುಬ್ಬರಾಯರ ಶಿಕ್ಷಕತ್ವ. ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ದೊಡ್ಡ ಪಾತ್ರವಹಿಸಿದೆ.

ಕಲಾವಿದ

ಅ.ನ. ಸುಬ್ಬರಾಯರನ್ನು ಕಲಾವಿದರನ್ನಾಗಿ ಪರಿಶೀಲಿಸಲು ದೊರಕಿರುವುದು 'ಗುಬ್ಬಿ ವೀರಣ್ಣ' ಎಂಬ ಭಾವಚಿತ್ರ ಒಂದೇ. ಬೇರೆ ಕೃತಿಗಳನ್ನು ರಚನೆ ಮಾಡಲಿ ಇಲ್ಲವೋ ಅಥವ ಮಾಡಿದ್ದು ಕಾಲವಶವಾಗಿವೆಯೊ ಸದ್ಯ ಹೇಳಬರುವುದಿಲ್ಲ.

'ಗುಬ್ಬಿವೀರಣ್ಣ' ಎಂಬ ವ್ಯಕ್ತಿ ಪ್ರಮಾಣದ ಭಾವಚಿತ್ರವೂ ಶಿಥಿಲಾವಸ್ಥೆಯಲ್ಲಿದೆ. ನಾಲ್ಕು ಮತ್ತು ಎಂಟು ಅಡಿಗಳ ಈ ತೈಲವರ್ಣಚಿತ್ರವು. ಒಂದು ಅಂದಾಜಿನ ಮೇರೆಗೆ. ಅರವತ್ತು ವರುಷಗಳನ್ನೇ ದಾಟಿದ ನೆನಪು ತಂದುಕೊಡುತ್ತದೆ.

ಗುಬ್ಬಿ ವೀರಣ್ಣನವರು ಕರ್ನಾಟಕ ರಂಗಭೂಮಿ ಕಂಡ ಒಬ್ಬ ಯುಗಪುರುಷ. ನಾಟಕ ಕಲೆ ಕೂಡಾ ಒಂದು ರೀತಿ ಅರಮನೆ ಆವರಣದಲ್ಲಿ ಅರಳುತ್ತಿದ್ದಾಗ, ತುಮಕೂರಿನ ಗುಬ್ಬಿ ಎಂಬ ಊರಿನಲ್ಲಿ ಮೂರು ಮತಧರ್ಮದ ಮಿತ್ರರು ಕೂಡಿ ಕಟ್ಟಿದ ಶ್ರೀ ಚೆನ್ನ ಬಸವೇಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಸಭಾ ಎಂಬುದೇ ಗುಬ್ಬಿ ಕಂಪನಿ ಎಂದು ಪ್ರಸಿದ್ಧವಾಯಿತು. ಕೆಲವು ವರ್ಷದಲ್ಲಿಯೇ ವೀರಣ್ಣನವರು. ಸಾಧಾರಣ ಸಂಬಳದ ಕೆಲಸಕ್ಕೆ ಕಂಪನಿ ಸೇರಿ. ಕಾಲಕ್ರಮೇಣ ಮಾಲೀಕರಾಗಿ. ನಂತರ ರಂಗಭೂಮಿಯ ಇತಿಹಾಸವನ್ನೇ ಬದಲಾಯಿಸಿದ್ದು, ಮನೆಮನೆಯ ಮಾತು. ಒಂದಲ್ಲ ಎರಡು ಮೂರು ಕಂಪನಿಗಳು, ನ ಎಲ್ಕೈದು ನಾಟಕ ಶಾಲೆಗಳು ನಿರ್ಮಿಸಿದ್ದು. ಬೆಂಗಳೂರಿನಲ್ಲಿ ಶಿವಾನಂದ ನಾಟಕ ಶಾಲೆಯ ಉದ್ಘಾಟನೆ ಕೈಗೊಂಡ ಪುಟ್ಟ ವರದಿಯೊಂದು. ಅನಸು 'ಕಲಾ' ಪತ್ರಿಕೆಯಲ್ಲಿ ಪ್ರಕಟವಾಗಿದೆ.[೧] ಅಂದರೆ ಸುಮಾರು

---

೧. ಕಲಾ. ಸಂ. ೧. ಸಂ. ೪, ಪು. ೧೨೧, ೧೯೩೦

೧೯೩೦ರಲ್ಲಿ. ಇಂದಿಗೆ ೬೭ ವರ್ಷಗಳ ಹಿಂದೆ. ಆ ಕಾಲಕ್ಕೆ ರೂಪಾಕೃತಿಗೆ ಫೋಟೋವನ್ನು. ಜರ್ಮನದ ಬಣ್ಣ ನುಣುಪಿಗೆ ಪ್ರತ್ಯಕ್ಷ ವೀರಣ್ಣನವರನ್ನೇ ರೂಪದರ್ಶಿಯಾಗಿ ಗಂಟೆಗಟ್ಟಲೆ ಕೂರಿಸಿಕೊಂಡು. ಅನಸು ಸಿದ್ಧಪಡಿಸಿದ ಚಿತ್ರ ಇದು.

ಕಡು ಕೆಂಪಿನ ಪರದೆ. ಅಲ್ಲಲ್ಲಿ ನೀಲಿಗೋಡೆಗಳ ರಂಗ ಸಜ್ಜಿಕೆಯ ಮುಂದೆ, ಗುಬ್ಬಿ ವೀರಣ್ಣನವರು ನಿಂತಿರುವುದು ಕಲಾಕೃತಿಯಲ್ಲಿ ಎದ್ದು ಕಾಣುತ್ತದೆ. ಮೈಸೂರಿನ ಜರೀಪೇಟ, ಎದೆಯ ಮೇಲೆ ಇಳಿಬಿಟ್ಟ ಜರೀ ಶಲ್ಯ - ಕರಿಕೋಟಿನ ಮೇಲೆ ಹೊಳೆಯುತ್ತದೆ. ಕಚ್ಚೆ ಪಂಚೆಯ ಅಂಚಿಗೂ ಜರೀ ಮೆರಗೂ ಮಿಂಚುತ್ತದೆ. ವೀರಣ್ಣನವರ ಎಡಕ್ಕೆ ರಂಗಮಂಟಪ ಇರುವಂತೆ. ಬಲಕ್ಕೆ ಶಿವಪಾರ್ವತಿ ಗಣಪತಿ ಕುಳಿತ ದೇವತಾ ಮಂಟಪ ಕೂಡಾ ಇದ್ದು. ವೀರಣ್ಣನವರ ಬದುಕಿನ ಅಮೂರ್ತ ಆಶ್ರಯದಾತರ ಪ್ರತಿಬಿಂಬಗಳಂತಿವೆ. ಶಲ್ಯದ ಅಂಚಿನಲ್ಲೂ ನುಸುಳಿ. ಕರಿಕೋಟಿನ ಜೇಬಿನಿಂದ ಇಣುಕು ಹಾಕುತ್ತಿರುವ ಚಿನ್ನದ ಪದಕ. ಕೊಂಚ ಹೊಟ್ಟೆ ಬರುತ್ತಿದೆಯೇನೊ ಎನ್ನುವಲ್ಲಿಯೇ ಉಬ್ಬಿದ ಎದೆ. ತೇಜಸ್ವಿ ಕಣ್ಣುಗಳ ಅಂಚಿಗೆ ಕಿವಿಗಳ ಹತ್ತ ಕಡಕದ ಚಿನ್ನದ ಮಿಂಚು. ಮುಖದಲ್ಲಿ ತಿಳಿನಗೆಯ ಸಿಂಚನದಲ್ಲಿಯೇ ಗಾಂಭೀರ್ಯದ ಭಾವ ತುಂಬಿ - ಇವೆಲ್ಲವು ಕನ್ನಡ ನಾಡಿನ ಸಾಮಾನ್ಯ ವ್ಯಕ್ತಿಯೊಬ್ಬ. ರಂಗಭೂಮಿಯ ಮುಖೇಣ ಪಡೆದ ನಿಂತ ವೈಭವವನ್ನು ಥಾಳಾಗಿ. ಒಂದು ಕಲಾಕೃತಿಯ ಮುಖೇಣವೇ ೬೫ ವರ್ಷಗಳ ನಂತರವೂ ನೋಡುಗರ ಕಣ್ಣಿಗೆ ಅರಿವಾಗುವಂತೆ ಅ. ನ. ಸುಬ್ಬರಾಯರು ಚಿತ್ರಿಸಿದ್ದಾರೆ.

ತಮ್ಮ 'ಕಲೆಯು ಯಾರದು ?' ಎಂಬ ಲೇಖನದಲ್ಲಿ ಅನಸು ಹೀಗನ್ನುತ್ತಾರೆ :

"ಸರ್ವರಿಗೂ ಕಲೆಯಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸುವುದಾಗಲಿ. ಕಲಾವೃತ್ತಿಯನ್ನವಲಂಬಿಸುವುದಾಗಲಿ ಸಾಧ್ಯವಾಗದಿರಬಹುದು. ಅದು ಅನವಶ್ಯಕವಾಗಿ ಕಾಣಬಹುದು.

ಆದರೆ 'ಕಲೆಯ ಗಂಧವಿಲ್ಲ, ಕಲೆಯನ್ನರಿಯುವ ಸಾಮರ್ಥ್ಯವಿಲ್ಲ ಎನ್ನಲವಕಾಶವಿಲ್ಲ. ಕಲೆಯು ಜನಸಾಮಾನ್ಯರ ಆಸ್ತಿ. ಇದನ್ನು ಅವರವರ ಇಚ್ಛೆ ಮತ್ತು ಉಪಾಸನೆಗನುಸಾರವಾಗಿ ಉಪಭೋಗಿಸಬಹುದು. ಈ ಅಧಿಕಾರವು ಸರ್ವರಿಗೂ ಉಂಟು''[೨]

ಈ ನೆಲೆಯಲ್ಲಿ ನಿಂತು, ಯಾವ ರಾಜಮಹಾರಾಜರಿಗೂ ಶ್ರೀಮಂತರಿಗೂ ಕಡಿಮೆಯಿಲ್ಲದ, ಶ್ರೀಸಾಮಾನ್ಯರಲ್ಲಿ ಅಸಾಮಾನ್ಯ ವ್ಯಕ್ತಿತ್ವ ಪಡೆದ ಗುಬ್ಬಿ ವೀರಣ್ಣ ಎಂಬ ಅಂಶ. ಮನದಟ್ಟಾಗುವ ಚಿತ್ರವನ್ನೇ, ಅನಸು, ರೊಮ್ಯಾಂಟಿಕ್ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ.

ಅಂದು ಯಾರದಾದರೂ ಬೇಡಿಕೆಗಾಗಿ ಕೃತಿ ರಚಿಸಿದರೊ ಅಥವಾ ತಾವು ನಂಬಿ ಬಂದ ಜೀವನ ಮೌಲ್ಯದ ವಿಶ್ವಾಸಕ್ಕೆ ತಕ್ಕಂತೆ, ನಾಡಿನ ಅಭಿಮಾನದ ಸಂಕೇತವಾಗಿ ಈ ರಚನೆಯನ್ನು ಅನಸು ಕೈಗೊಂಡರೊ ಈಗ ಹೇಳಲು ಬರುವುದಿಲ್ಲ. ಆದರೆ ಕಲೆಗಾಗಿ ಕಲೆ ಎಂಬುದನ್ನು ವಿರೋಧಿಸದೆ ಇದ್ದರೂ ಒಪ್ಪದ ಅನಸು, ಜೀವನಕ್ಕಾಗಿ ಕಲೆ ಎಂಬ ಧ್ಯೇಯವನ್ನೇ ''ಗುಬ್ಬಿವೀರಣ್ಣ'' ಕೃತಿ ಚಿತ್ರಿಸುವಾಗಲೂ, ವಸ್ತು ಬಣ್ಣ ರೇಖೆಗಳ ಮುಖೇಣ ಮೂಡಿಸಿರುವುದು ಸ್ಪಷ್ಟವಾಗಿಯೇ ಇದೆ.

ಅನಸು ''ಕಲಾಭ್ಯಾಸಿಗಳಿಗೆ ಸಲಹೆ'' ಎಂದು ನೀಡಿರುವ ಹತ್ತಾರು ಸಲಹೆಗಳಲ್ಲಿ ಮುಖ್ಯವಾದುದು ಈ ಎರಡು :

''ಚಿತ್ರದ ಜೋಡಾಣೆಕೆಯಲ್ಲಿ ಚಮತ್ಕಾರ ತೋರಲು ಮೊದಲು ನೋಟಕರು ಯಾವುದನ್ನು ನೋಡಲು ಅಭಿರುಚಿಯನ್ನು ತೋರಬೇಕೆಂಬುದು ನಿರ್ಧರಿಸಿ ಅದಕ್ಕೆ 'ತಕ್ಕ ಸ್ಥಾನವನ್ನಿತ್ತು ಅದನ್ನು ಹೊಂದಿಕೊಂಡಿರುವಂತೆ ಕೆಲಸವನ್ನು ಮುಂದರಿಸಬೇಕು.

---

೨. ಕಲಾ, ಸು. ೩. ಸಂ. ೩, ಪು. ೮೩, ೧೯೩೧ ಸೆಪ್ಟೆಂಬರ್

ನಾವು ನಮೂನೆ, ಹೊಂದಾಣಿಕೆ, ಮಾದರಿ, ಸಂವಿಧಾನ ಮುಂತಾದ ವಿಷಯದಲ್ಲಿ ಬಹುವಾಗಿ ಕೇಳುವೆವು. ಇವುಗಳಲ್ಲಿ ಸಿಕ್ಕಿ ನರಳುವ ಅಗತ್ಯವಿಲ್ಲ. ಇವೆಲ್ಲವನ್ನೂ ಕ್ರೋಢೀಕರಿಸಿ 'ಚಿತ್ರರಚನೆ' ಎಂಬ ಒಂದು ಮಾತಿನಲ್ಲಿ ಹೇಳಬಹುದು. ಚಿತ್ರರಚನೆಯೆಂದರೆ ಸಮರಸವಾಗಿ ಹೊಂದಿಕೆಯಾಗಿರುವಂತೆ ಅನೇಕ ವಸ್ತುಗಳನ್ನು ಹೊಂದಿಸಿ ಬರೆದಿರುವ ಕ್ರಮ. ಚಿತ್ರಕಲೆಯಲ್ಲಿಯೂ ವರ್ಣ ಚಿತ್ರದಲ್ಲೂ ಇದೊಂದು ಮುಖ್ಯ ವಿಷಯ."[೩]

ಅನಸು, ಕಲೆಯ ಪರಿಕಲ್ಪನೆಯಾಗಿ ಸ್ವೀಕರಿಸಿದ ನೆಲೆಯಲ್ಲಿ, 'ಗುಬ್ಬಿವೀರಣ್ಣ' ಎಂಬ ಅವರ ಕೃತಿಯಲ್ಲಿ ಮುಖ್ಯವಾದದ್ದು ದೃಗ್ದರ್ಶನ (Perspective). ಕೃತಿಯೊಳಗೆ ರಂಗಸಜ್ಜಿಕೆಯ ಕಂಬ, ಪರದೆ, ಕೆಳಗೆ ಹಾಸಿದ ಕಂಬಳಿ - ಇವೆಲ್ಲವೂ ಕೃತಿಯ ಕೇಂದ್ರಮುಖಿಯಾದ ವ್ಯಕ್ತಿ ವೀರಣ್ಣನವರ ಆಳೆತ್ತರದ ನಿಲುವಿಗೆ ಸಮತೋಲನವನ್ನು ಒದಗಿಸಿವೆ.

ಆದರೆ ಒಂದು ನೋವಿನ ಕೊರತೆ ಎಂದರೆ, ಕೃತಿಯನ್ನು ಕಲಾವಿದ ಅನಸು ಪೂರ್ಣ ಮಾಡಿದ್ದಾರೆ ಅನ್ನಿಸುವುದಿಲ್ಲ. ಮುಖ ಹಾಗೂ ಎದೆಯ ಭಾಗದ ಕೆಲಸ, ಅನಂತರದ ಭಾಗಗಳಲ್ಲಿ ಕಂಡು ಬರುವುದಿಲ್ಲ. ಮಾಡದೆ ಬಿಟ್ಟರೊ, ಇರುವುದೆ ಹೀಗೊ - ಕೃತಿಮಾತ್ರ ಅಪೂರ್ಣ.

ಹಾಗೆ ನೋಡಿದರೆ, ಅನಸುಬ್ಬರಾಯರ ಕಲಾಕೃತಿರಚನೆಯು ಕಲಾವಿದತನಕ್ಕೇ ಈ ಕೃತಿ ಒಂದು ಸಂಕೇತವಾಗಿ, ಇನ್ನಿತರ ಶಾಖೆಗಳಲ್ಲಿ ಕಲಾವಿದನ ಹೃದಯವಂತಿಕೆಯನ್ನು ಕಂಡುಕೊಳ್ಳುವ ಪ್ರಯತ್ನ ನಡೆಸಿದರೇನೋ ಎಂದೇ ಅನ್ನಿಸುತ್ತಿದೆ.

೩. ಕಲಾ, ಸಂ. ೪, ಸಂ. ೭, ಪು. ೫೯, ೧೯೩೨ ಆಗಸ್ಟ್

ಕಲಾಸಾಹಿತಿ

ಅ. ನ. ಸುಬ್ಬರಾವ್, ಶಿಕ್ಷಕರಾಗಿ ಬರವಣಿಗೆ ಶುರುಮಾಡುವ ಕಾಲಕ್ಕೆ ತತ್ವಶಾಸ್ತ್ರ ಮತ್ತು ಮನಶ್ಶಾಸ್ತ್ರಗಳಲ್ಲಿ ಹೆಸರು ಮಾಡಿದ್ದವರು ಎಸ್. ರಾಧಾಕೃಷ್ಣನ್ ಹಾಗೂ ಎ. ಆರ್. ವಾಡಿಯಾ ಅವರು. ಆದರೆ ಇವರಿಗಿಂತ ಆಳವಾದ, ತೂಕದ ಬರವಣಿಗೆ ನಡೆಸಿ, ವಿಶ್ವದ ಕಣ್ಣುಗಳನ್ನು ಭಾರತೀಯ ಸೌಂದರ್ಯಶಾಸ್ತ್ರದತ್ತ ಸೆಳೆದವರು ಎಂ. ಹಿರಿಯಣ್ಣನವರು. ಇವರೆಲ್ಲರ ಬರವಣಿಗೆಯೂ ಇಂಗ್ಲಿಷ್‌ನಲ್ಲಿ ಸೆಲೆವಡೆದದ್ದು. ಇವರಲ್ಲಿ ಹಿರಿಯಣ್ಣನವರು ಪಠ್ಯಪುಸ್ತಕದ ಪಾಠ ಹಾಗೂ ನೇರವಾಗಿ ಜೀವನದ ಪಾಠ ಹೇಳಿದ ಗುರುಗಳು. ಸುಬ್ಬರಾಯರ 'ಲಲಿತಕಲಾತತ್ವ'ದ ಹಿನ್ನೆಲೆಗೆ ಗುರು ಹಿರಿಯಣ್ಣನವರ ವಿಚಾರ ಪ್ರಚೋದನೆ ಇರುವಂತೆ ಕಾಣುತ್ತದೆ:

> "ಚಿತ್ರಕಾರನಿಗೆ ಪದಗಳು ಬೇಕಿಲ್ಲ ! ಆತನಿಗೆ ಬೇಕಾದುದು ಸೂಕ್ಷ್ಮದೃಷ್ಟಿಯ ವಿಮರ್ಶನ ಶಕ್ತಿ. ಪ್ರಕೃತಿಯಲ್ಲಿ ಕಂಡು ಬರುವ ವರ್ಣ, ರೂಪ ಮತ್ತು ಪ್ರಮಾಣಗಳನ್ನು ವ್ಯಕ್ತಗೊಳಿಸುವುದು ಮಾತ್ರವಲ್ಲದೆ ತನ್ನ ಮನದೊಳಗೆ ಮೂಡಿದ ಉತ್ತಮ ಧ್ಯೇಯಗಳನ್ನು ಕೂಡ ದ್ಯೋತಗೊಳಿಸುವನು. ಕವಿಯು ಸುಲಲಿತ ಛಂದೋಬದ್ಧವಾದ ಮಾತುಗಳ ಜೋಡಿಕೆಯಿಂದ ಇಂತಹ ಸೊಬಗಿನ ಸೃಷ್ಟಿ ಮಾಡಿದರೆ, ಕಲಾವಿದನು ತನ್ನ ರೇಖೆಗಳಿಂದಲೂ ಬಣ್ಣಗಳಿಂದಲೂ, ಆ ಅತಿಶಯ ಸನ್ನಿವೇಶವನ್ನು ಕಲ್ಪಿಸಿ, ಆನಂದವನ್ನು ಮೂರ್ತಿಗೊಳಿಸುವನು."
>
> "ದೃಶ್ಯವನ್ನು ಕಣ್ಣಾರೆ ಕಾಣುವ ಸೌಲಭ್ಯವು ಕಲೆಯಲ್ಲಿ ಉಂಟು. ಆದರೂ ಚಿತ್ರದ ಪೂರ್ಣ ಫಲವನ್ನು ಪಡೆಯಲು ಮನವು ಸೌಂದರ್ಯೋಪಾಸನೆ ಮಾಡಿ, ಕೃತಿಯೊಳಗಿನ ಆನಂದವನ್ನು

ಆಸ್ವಾದಿಸುವ ದಾರಿಯನ್ನರಿತಿರಬೇಕು. ಚಿತ್ರದೊಳಗಿನ ಸನ್ನಿವೇಶದ ಸುಖದುಃಖಗಳನ್ನು ತಾದಾತ್ಮ್ಯಭಾವದಿಂದ ಅನುಭವಿಸುವ ಬಳಕೆಯಾಗಬೇಕು. ಆದುದರಿಂದಲೇ ಕಲಾಭ್ಯಾಸವು ಬಾಲ್ಯದಿಂದ ಸಾರ್ವತ್ರಿಕವಾಗಿ ನಡೆಯಬೇಕೆಂದು ನಾವು ಆಶಿಸುವೆವು."[೧]

ಅಂತೆಯೇ ಮುಂದೆ ಗಾಂಧೀಜಿ ಸ್ವದೇಶಿ ಚಳುವಳಿ, ವಿಶ್ವೇಶ್ವರಯ್ಯನವರ ಕೈಗಾರಿಕೆ ಉದ್ದಿಮೆಗಳ ಪ್ರಭಾವಕ್ಕೆ ಯುವಕ ಸುಬ್ಬರಾವ್ ಪೂರ್ಣ ಒಳಗಾದುದು, ರಾಷ್ಟ್ರ ಪುನರುಜ್ಜೀವನ ಕಾಲದ ಸಹಜ ಲಕ್ಷಣವೇ ಆಗಿದೆ. ಆದರೆ ತಮಗಿಂತ ಎರಡು ವರ್ಷ ಚಿಕ್ಕವರಾದ: ಆನಂದಕುಮಾರಸ್ವಾಮಿ, ಇ. ಬಿ. ಹಾವೆಲ್, ಜೇಮ್ಸ್ ಕಸಿನ್ಸ್, ಓ. ಸಿ. ಗಂಗೂಲಿ, ಪೆರ್ಸಿಬ್ರೌನ್, ಎನ್. ಸಿ. ಮೆಹ್ತ, ಸ್ಟೆಲ್ಲಕ್ರಾಮ್‌ರಿಚ್ - ಅವರ ಸಾಲಿಗೆ ಸೇರಿದ, ಕರ್ನಾಟಕದವರಾದ ಕಲಾಸಾಹಿತಿ ಜಿ. ವೆಂಕಟಾಚಲಂ ಅವರು, ಸುಬ್ಬರಾಯರಿಗೆ ಯಾವ ರೀತಿಯಿಂದಲೂ ಗಮನ ಸೆಳೆಯದೆ ಹೋದುದು ಆಶ್ಚರ್ಯ ಉಂಟುಮಾಡುತ್ತಿದೆ. ತಮಗಿಂತ ಹನ್ನೊಂದು ವರ್ಷಗಳೇ ಚಿಕ್ಕವರಾದ ಶಿವರಾಮಕಾರಂತರು, ಇನ್ನೊಂದು ಬದಿಗೆ ಕಲೆಯ ಪತ್ರಿಕೆ, ಕಲಾಪುಸ್ತಕಗಳನ್ನು ಅಷ್ಟು ಹೊತ್ತಿಗಾಗಲೇ ಪ್ರಕಟಿಸಿದ್ದರು ಎಂಬುದು ಇಲ್ಲಿ ಮುಖ್ಯವಾಗಿದೆ. ಆದರೆ ಕಾರಂತರು ಸ್ವಂತ ಅಭ್ಯಾಸ, ಓದು, ಜಗತ್ತಿನ ಪರ್ಯಟನೆಯಿಂದ ಕಲೆಯ ಬಗ್ಗೆ ತಿಳಿದವರು ಎಂಬುದು ಒಂದು ಮಾದರಿಯಾಗಿ ಎಣಿಸಬೇಕಾದ ಅಂಶ. ಹಾಗೆಯೇ ಸುಬ್ಬರಾಯರ ಮುಂದೆ ಬಹಳ ಚಿಕ್ಕವರಾದ ಅ. ನ. ಕೃಷ್ಣರಾಯರು, ನಾಡಿನ ರಾಷ್ಟ್ರದ ಕಲಾವಿದರೊಂದಿಗೆ ನೇರ ಸಂಪರ್ಕ ಇಟ್ಟುಕೊಂಡು, ಅಧ್ಯಯನದಲ್ಲಿ ತೊಡಗಿ, ಕಲಾವಿದರ ಬದುಕಿನ ಬಗ್ಗೆಯೂ ಅಪಾರ ಆಸಕ್ತಿಯನ್ನು ಉಳಿಸಿಕೊಂಡು, ಕಲೆಯ ಬರವಣಿಗೆಯಲ್ಲಿ ತೊಡಗಿದ ಇನ್ನೊಂದು

೧. 'ಲಲಿತ ಕಲಾ ತತ್ವ', ಕಲಾ, ಸಂ. ೧, ಸಂ. ೭, ಪು. ೧೬೮, ೧೯೩೦

ಮಾದರಿಯಾಗಿ ನಿಂತಿದ್ದಾರೆ. ತಮಗಿಂತ ಎಂಟು ವರ್ಷಗಳು ಚಿಕ್ಕವರಾಗಿ, ವಿಶ್ವವಿದ್ಯಾನಿಲಯದ ಪ್ರೌಢವ್ಯಾಸಂಗದಿಂದ, ಕಲೆಯ ಬಗ್ಗೆ ಸೂಕ್ಷ್ಮವಾದ ತಿಳುವಳಿಕೆ ಪಡೆದುಕೊಂಡ ವಿ. ಸೀತಾರಾಮಯ್ಯ ಅವರು, ಆ ಕಾಲಕ್ಕೇ ಕಲೆಯ ಕುರಿತು ಬರವಣಿಗೆ ಮಾಡಿದ್ದರೇ, ಸುಬ್ಬರಾಯರಿಗೆ ಆ ಮೂಲಕ ಹತ್ತಿರವಾಗಿದ್ದರೇ ಎಂಬುದರ ಬಗ್ಗೆ ಅಷ್ಟು ಮಾಹಿತಿ ಸಿಕ್ಕಿಲ್ಲ. ಆದರೂ ಹಿರಿಯಣ್ಣನವರ ನೇರ ಶಿಷ್ಯರಾಗಿ, ಕಾರಂತರ ಜೀವದ ಗೆಳೆಯರಾಗಿ, ಮುಂದೆ ಕಲೆಯ ಬಗ್ಗೆ ಅನೇಕ ಲೇಖನ - ಪುಸ್ತಕಗಳನ್ನು ಕನ್ನಡದಲ್ಲಿ ಬರೆದ ವಿ. ಸೀ. ಅವರು, ಮತ್ತೊಂದು ಮಾದರಿ ಎಂಬುದನ್ನು ಮರೆಯುವಂತಿಲ್ಲ. ಕೊನೆಯ ಪಕ್ಷ, ಪಾಶ್ಚಾತ್ಯರ ಪ್ರಭಾವದಿಂದ ಇತ್ತೀಚೆಗೆ ಅನ್ಯಜ್ಞಾನದ ಶಿಸ್ತು, ಪೌರ್ವಾತ್ಯರ ಸಾಂಪ್ರದಾಯಿಕ ಬಹುಶುತ್ರರ ಮಾದರಿಗಳಲ್ಲಿ ಈ ಅಂಶಗಳು ತುಂಬ ಬೆಲೆಯುಳ್ಳದ್ದಾಗುತ್ತವೆ.

ಈ ನೆಲೆಯಲ್ಲಿ ನಿಂತು, ಸ್ವತಃ ಕಲೆಯನ್ನು ಮೈಸೂರು, ಮದರಾಸಿನ ಕಲಾಶಾಲೆಗಳಲ್ಲಿ ಗಂಭೀರವಾಗಿ ಅಭ್ಯಾಸ ಮಾಡಿದವರು, ಹಲವಾರು ವರ್ಷ ಕಲಾ ಶಿಕ್ಷಕರಾದವರು, ಕೃತಿ-ರಚನೆಯಲ್ಲಿ ತೊಡಗಿದವರು ಅ. ನ. ಸುಬ್ಬರಾಯರು. ಈವರೆಗಿನ ಕಲಾಚರಿತ್ರೆಕಾರರು, ಕಲಾಸಾಹಿತಿಗಳು ನಿರೀಕ್ಷಿಸುವ ಆದರೆ ಗಮನಿಸದೆ ಹೋದ ಒಂದು ಮಾದರಿಯ ಪ್ರತೀಕವಾಗಿದ್ದಾರೆ ಅ. ನ. ಸುಬ್ಬರಾಯರು.

"ಹಿಂದಿನ ದಿನಗಳಿಗಿಂತಲೂ ಮುಂದಿನ ದಿನಗಳು ಬಹು ವಿಷಮವಾಗಿರುವಂತೆ ಕಂಡು ಬರುತ್ತಿವೆ. ದೇಶಬಾಂಧವರನೇಕರ ದೃಷ್ಟಿಯು ದೇಶದ ಕಲಾಕೌಶಲ್ಯಾಭಿವೃದ್ಧಿಯ ಕಡೆಗೆ ತಿರುಗಿಲ್ಲವು. ಇದರಿಂದ ಅನೇಕ ಉತ್ತಮ ಕೈಗಾರಿಕೆಗಳು ಹಾಳಾಗಿ ಹೋದುವು. ಮತ್ತೆ ಕೆಲವು ಕುಟುಕು ಜೀವದಿಂದಿರುವುವು. ದೇಶದ ಇಂತಹ ದುಃಸ್ಥಿತಿಗೆ ಸರಕಾರದವರು ಜವಾಬುದಾರರಾದರೂ, ಪ್ರಜೆಗಳ ಭಾರವೂ ಅತಿಯಾಗಿರುವುದು. ಇಂದಲ್ಲದಿದ್ದರೆ ಇನ್ನು ಕೆಲವು

ದಿನಗಳಲ್ಲಿ ಸ್ವರಾಜ್ಯವನ್ನು ಸಂಪಾದಿಸಬಹುದು. ಆದರೆ ದೇಶದ ಆರ್ಥಿಕ ಸಾಮಾಜಿಕ ಉನ್ನತಿಯಾಗಿ : ನಮ್ಮ ಪೂರ್ವದ ನಾಗರೀಕತೆಯ ಅಂತಸ್ತಿಗೆ ಬಂದು ನಾವು ಜನಾಂಗಗಳ ಮುಂದೆ ತಲೆಯೆತ್ತಿ ನಿಲ್ಲಲು. ಇನ್ನೂ ಅನೇಕ ವರುಷಗಳು ಅವಿಚ್ಛಿನ್ನವಾಗಿ ಕೆಲಸ ಮಾಡಬೇಕೆಂಬುದು ನನ್ನ ಅಭಿಪ್ರಾಯ."[೨]

ಹೀಗೆ ತಮಗೆ ತಾವೇ ಕಲೆಯ ಮುಖೇಣ. ಭಾರತದ ಸಮಗ್ರ ಸಂಸ್ಕೃತಿಯ ಪುನರುಜ್ಜೀವನದ ಜವಾಬ್ದಾರಿ ಹೊತ್ತುಕೊಂಡವರು ಸುಬ್ಬರಾಯರು. ಅದಕ್ಕಾಗಿ ಏಕ ಕಾಲಕ್ಕೆ ಅನೇಕ ಪಾತ್ರಗಳನ್ನು ಧರಿಸಿ ನಿಲ್ಲಬೇಕಾಯಿತು :

೧. ಮಕ್ಕಳ ಹಂತದಲ್ಲಿ ಕಲಾ ಆಸಕ್ತಿ ಮೂಡಿಸುವ ಬರವಣಿಗೆ.

೨. ಅಭ್ಯಾಸಿಗಳ ಹಂತದಲ್ಲಿ ಕಲಾಬೋಧನೆಗೆ ತೊಡಗುವ ಬರವಣಿಗೆ.

೩. ತಮ್ಮ ಅನುಭವ, ಆಲೋಚನೆಗಳನ್ನು ಅಭಿವ್ಯಕ್ತಿಸುವ ಬರವಣಿಗೆ.

೧೯೧೬ರ ಕಾಲಕ್ಕೇ "ಪುಷ್ಪರಚನೆ" ಹಾಗೂ "ಮಕ್ಕಳ ತಿದ್ದುವಿಕೆ" ಎಂಬ ಪುಸ್ತಕಗಳನ್ನು ಪ್ರಕಟಿಸಿದ್ದು. ಸದ್ಯ ಅವು ದೊರಕುತ್ತಿಲ್ಲ. ಆದರೆ, ೧೯೭೩ರಲ್ಲಿ ಪ್ರಕಟಿಸಿದ "ದೃಗ್ದರ್ಶನ"(Perspective) ಎಂಬ ಪುಸ್ತಕ ಅಧ್ಯಯನಕ್ಕೆ ಲಭಿಸುತ್ತಿದೆ.

೧೯೩೦ ಫೆಬ್ರುವರಿ ಮೊದಲ "ಕಲಾ" ಸಂಚಿಕೆಯಲ್ಲಿಯೇ ಅನಸು. ಶುದ್ಧ ಬಣ್ಣಗಳು ಮಿಶ್ರಬಣ್ಣಗಳು ಬಗ್ಗೆ ಒಂದು ಪುಟ ವರ್ಣಚಿತ್ರ ಪ್ರಕಟಿಸಿದ್ದಾರೆ. ಬಣ್ಣಗಳ ಹೆಸರುಗಳು ಬಿಟ್ಟರೆ ಬೇರೆ ಯಾವ ವಿವರಣೆಯ ಭಾರವೂ ಇಲ್ಲ. ಅದೇ ಸಂಚಿಕೆಯ ಪುಟ ೧೨ರಲ್ಲಿ "ಬಡವರ ಮನೆಯ ಪಾತ್ರೆಗಳು" ಎಂಬ ಕಪ್ಪು ಬಿಳುಪಿನ ಚಿತ್ರದ ಅಡಿಯಲ್ಲಿ.

೨. ೧೯೨೮ರಲ್ಲಿ ಹಾನಗಲ್ಲಿನಲ್ಲಿ ನಡೆದ ಕಲಾಪ್ರದರ್ಶನ ಮಹೋತ್ಸವದ ಅಧ್ಯಕ್ಷರಾಗಿ ಅನಸು ಮಾಡಿದ ಭಾಷಣ, 'ಕಲಾಕುರುಹು", ಕಲಾ, ಸಂ. ೧, ಸಂ. ೭, ಪು. ೧೭೪, ೧೯೩೦

'ಬಾಲಕರೇ ! ನಿಮ್ಮ ಮನೆಯಲ್ಲಿ ಇಂತಹ ಪದಾರ್ಥಗಳು ಸಿಕ್ಕುವುದಿಲ್ಲವೇ ನೀವೇಕೆ ಬರೆಯಬಾರದು ?' ಎಂದು ಹೆಸರಿಸದೆಯೇ ಸ್ಟಿಲ್‌ಲೈಫ್ ಬಗ್ಗೆ ಗಮನ ಸೆಳೆಯುತ್ತಾರೆ. ಅದೇ ಸಂಚಿಕೆಯ 'ಕಲಾಪ್ರಪಂಚ' ಎಂಬ ಪುಟದಲ್ಲಿ:

"ನಮ್ಮ ಭಾರತ ಭೂಮಿಯು ಪರಕೀಯರ ನಾಗರೀಕತೆಯ ಪ್ರವಾಹಕ್ಕೆ ಸಿಕ್ಕಿ ನುಚ್ಚು ನೂರಾಗಿ ಹೋಗಿದೆ. ಇದರಿಂದ ನಮ್ಮ ಸಂಸ್ಕೃತಿಗೂ ಕಲೆಗೂ ದೊಡ್ಡ ಆಘಾತವಾಗಿ ನಮ್ಮ ಅಸ್ತಿತ್ವವು ನಾಶವಾಗುತ್ತ ಬಂದಿದೆ. ಇಂದು ಕಲಾಭಿವೃದ್ಧಿಯ ದೃಷ್ಟಿಯಿಂದ ಕಾರ್ಯ ಮಾಡಬೇಕಾದವರು : ಕಲಾಸೌಧವನ್ನು ಕಟ್ಟುವುದಕ್ಕೆ ಮೊದಲು ಅಡಿಪಾಯವನ್ನು ಭದ್ರ ಪಡಿಸಬೇಕು. ಮಕ್ಕಳಲ್ಲಿರುವ ಕಲಾಂಕುರಗಳನ್ನು ಉತ್ತಮ ರೀತಿಯಲ್ಲಿ ಬೆಳಸಿ. ಅವರ ಕ್ರಿಯಾ ಶಕ್ತಿಯನ್ನು ವೃದ್ಧಿಗೊಳಿಸಬೇಕು. ಜನರಲ್ಲಿನ ಕಲಾಭಿಮಾನವನ್ನು ಬಳಸಿ. ನಾನಾ ಬಗೆಯ ಕಲಾಭಿವೃದ್ಧಿಯ ಕಾರ್ಯಗಳನ್ನು ಕೈಗೊಳ್ಳುವುದು ಅಗತ್ಯದ ಕಾರ್ಯ. ನಮ್ಮ ಪ್ರಾಚೀನ ಕಲೆಯ ಮಾದರಿಗಳನ್ನು ಕಾಯ್ದುಕೊಳ್ಳುವುದಕ್ಕೂ. ಕಲಾ ಸಾಹಿತ್ಯವನ್ನು ವೃದ್ಧಿಗೊಳಿಸುವುದಕ್ಕೂ ಅಹರ್ನಿಶ ಪ್ರಯತ್ನಿಸಬೇಕಾಗಿದೆ. ಅಳಿಸಿ ಹೋಗಿರುವ ಭಾರತೀಯ ಕಲೆಯ ಪುನರುದ್ಧಾರ ಕಾರ್ಯವಾದರೂ ಅಲಕ್ಷ್ಯ ಮಾಡತಕ್ಕುದಲ್ಲ."[೩]

ಈ ಒಂದು ಜವಾಬ್ದಾರಿಯಿಂದಲೇ ಮುಂದಿನ ಪುಟಗಳಲ್ಲಿ 'ಚಿತ್ರಕಲೆ'ಯ ಪ್ರಾರಂಭಿಕ ಆದರೂ ಗಂಭೀರ ವಿವರಣೆಗೆ ಅನಸು ತೊಡಗುತ್ತಾರೆ. ಮೂಲತಃ ಇರಬೇಕಾದ ವಸ್ತು ಜ್ಞಾನ ಅಥವ ವ್ಯಕ್ತಿ ಜ್ಞಾನದ ಬಗ್ಗೆ. ಸೌಂದರ್ಯಾಭಿಲಾಷೆ ಬಗ್ಗೆ. ಮಗುವಿನ ಕ್ರಿಯಾಶಕ್ತಿ

---

೩. ಕಲಾ ಪ್ರಪಂಚ, ಸಂ. ೧, ಸಂ. ೧, ಪು. ೧೩, ೧೯೩೦ ಫೆಬ್ರುವರಿ

ಬಗ್ಗೆ - ಒಬ್ಬ ಶಿಕ್ಷಕನಾಗಿ, ಪೋಷಕನಾಗಿ ತಿಳುವಳಿಕೆ ನೀಡಲು ಶ್ರಮಿಸಿದ್ದಾರೆ.

ಹೀಗೆ ಏಕ ಕಾಲಕ್ಕೆ ಭಾಷೆ ರಹಿತವಾಗಿ, ಚಿತ್ರಕ್ಕೆ ಬೇಕಾದ ಪದಗಳ ಸಹಿತವಾಗಿ, ಮುಂದೆ ಎಷ್ಟು ಬೇಕೋ ಅಷ್ಟೇ ವಿವರಣೆ ಮೂಲಕ ಚಿತ್ರಕಲೆಯ ಬಗ್ಗೆ ಮಕ್ಕಳು, ಅಭ್ಯಾಸಿಗಳು, ಗಂಭೀರ ಓದುಗರಿಗೆ ತಮ್ಮನ್ನು ಕಲೆಯಲ್ಲಿ ತೊಡಗಿಸುವ ತ್ರಿಮುಖಿ ಸ್ವರೂಪ ಉಳ್ಳವರಾಗಿದ್ದರು ಅನಸು ಎಂಬುದು ಇಂದಿಗೂ ಮಹತ್ವದ ಅಂಶವಾಗಿದೆ.

ಹಾಗೆಂದು ಆ ಮಟ್ಟಕ್ಕೇ ನಿಂತು ಹೋದವರೇನಲ್ಲ ಅನಸು. ಆ ಹಂತದಿಂದ ಕ್ರಮೇಣ ತಮ್ಮ ಸಮಾಜ - ಪರಿಸರ - ತಪ್ಪು ತಿಳುವಳಿಕೆಯನ್ನು ತಿದ್ದುವ ಕೆಲಸ ಕೈಗೊಂಡವರು. ಚಿತ್ರಕಲೆಯ ಬಗ್ಗೆ, ವರ್ಣಚಿತ್ರಗಳ ಅಭ್ಯಾಸದ ಬಗ್ಗೆ, ಕುಂಚದ ಕೆಲಸದ ಬಗ್ಗೆ - ಹೀಗೆಯೇ ಕ್ರಮೇಣ 'ವರ್ಣಜ್ಞಾನ'ದ ಬಗ್ಗೆ, ಆ ಮೂಲಕ 'ಚಿತ್ರವರಿಯುವ ರೀತಿ' ಬಗ್ಗೆ - ಕನ್ನಡದ ನುಡಿಗಟ್ಟನ್ನೇ ಹೇಗೆ ಹದ ಮಾಡಿಕೊಂಡರು ಎಂಬುದು ಕಲೆಯ ಬಗ್ಗೆ ವೈಜ್ಞಾನಿಕ ಭಾಷಿಕ ನೆಲೆಯವರಿಗೂ ಮುಖ್ಯವಾಗುವ ಸಂಗತಿಯಾಗಿದೆ. ಇಷ್ಟಾಗಿಯೂ ಅನಸು. ಎಂತಹ ಎಚ್ಚರ - ದೂರವನ್ನು ಕಾಪಾಡಿಕೊಂಡಿದ್ದರೆಂಬುದು ಅವರ ಕ್ರಿಯಾಶೀಲತೆಯ ಸಂಕೇತವಾಗಿ ಕಾಣುತ್ತಿದೆ :

> "ನಾನು ಇಂದು ಹೇಳುವುದು ನಿಯಮ ನಿಬಂಧನೆಗಳೂ ಅಲ್ಲ : ನೋಡಬೇಕಾದ ಕ್ರಮವೂ ಅಲ್ಲ. ಚಿತ್ರ ನಿರ್ಮಾಣ ಮಾಡುವ ಕಲಾವಿದನು ತನ್ನ ಕೃತಿಗಳಿಗೆ ಒಂದು ಸನ್ನಿವೇಶವನ್ನು ಕಲ್ಪಿಸಿಕೊಂಡು ಕೆಲವು ಭಾವನೆಗಳಿಗೋ ಮೂರ್ತಿಗಳಿಗೋ ಆಕಾರವಿತ್ತು, ಪರಿಸ್ಥಿತಿಗೆ ತಕ್ಕ ಬಣ್ಣ ಕೊಟ್ಟಿರುವನು. ಒಂದೇ ಚಿತ್ರಪಟದಲ್ಲಿ ತಂದಿರುವ ಅನೇಕ ವಸ್ತುಗಳಲ್ಲಿಯೂ ವ್ಯಕ್ತಿಗಳಲ್ಲಿಯೂ ಭಾವನೆಗಳಲ್ಲಿಯೂ ಕೆಲವಕ್ಕೆ ಪ್ರಾಧಾನ್ಯವಿತ್ತು ಮತ್ತೆ ಕೆಲವಕ್ಕೆ ಸಾಮಾನ್ಯ

ಸ್ಥಾನವನ್ನಿತ್ತಿರುವನು. ಇವುಗಳೆಲ್ಲ ಯಥಾವತ್ತಾಗಿ ಪ್ರೇಕ್ಷಕರ ಮನಸ್ಸಿನಲ್ಲಿ ಮೂಡಿ ಕಲಾವಿದನ ಭಾವ ಪ್ರಬೋಧವಾಗಲು ಚಿತ್ರಗಾರನು ಹಿಡಿದ ಹಾದಿಯ ಸುಳಿವರಿಯಬೇಕಾಗುವುದು. ಅವನು ಕಲ್ಪಿಸಿಕೊಂಡಿರುವ ಪರಿಸ್ಥಿತಿಯನ್ನು ಊಹಿಸಿ ಆ ಸನ್ನಿವೇಶವನ್ನರಿತುಕೊಂಡು ನಂತರ ಆಯಾ ವಸ್ತುಗಳನ್ನೂ ವ್ಯಕ್ತಿಗಳನ್ನೂ ಅದರ ಸ್ಥಾನದಲ್ಲಿ ಊಹಿಸಿ ಅವಕ್ಕೆ ಜೀವಕಳೆ ತುಂಬಿ ಚಿತ್ರದ ಆನಂದವನ್ನನುಭವಿಸಬೇಕಾಗುವುದು. ಚಿತ್ರದಿಂದ ಇಂತಹ ಫಲ ಪಡೆಯಲು ಕಣ್ಣನ್ನು ನಾಗಾಲೋಟ ಓಡಿಸುತ್ತಾ ಹಾಳೆಗಳನ್ನು ಬೇಗ ಬೇಗನೆ ತಿರುವಿಹಾಕುವುದರಿಂದ ಸಾಧ್ಯವಾಗಲಾರದು. ಆ ಚಿತ್ರಗಳನ್ನು ಸರಿಯಾದ ಸ್ಥಳದಲ್ಲಿಟ್ಟುಕೊಂಡು ನಿಧಾನವಾಗಿ ಅದರಲ್ಲಿನ ಪ್ರತಿ ವಿಷಯವನ್ನೂ ಅವಗಾಹನ ಮಾಡಿಕೊಳ್ಳುತ್ತ ಬರಬೇಕಾಗುವುದು. ಇದೇ ನಾನು ಬರೆಯಲೆತ್ನಿಸುವ ಲೇಖನದಿಂದ ತಿಳಿಸಬೇಕೆಂದು ಆಶಿಸುವುದು."[೪]

ಅಂಥ ಅವಗಾಹನೆಗೆ ಬೇಕಾದ ದೃಶ್ಯ ಚಿತ್ರರಚನಾ ವಿಧಾನವನ್ನು ಕಲಾ ಅಭ್ಯಾಸಿಗಳಿಗೂ, ಕಲಾ ಅಭಿರುಚಿಯುಳ್ಳವರಿಗೂ ಕೂಲಂಕಷವಾಗಿ ಸಚಿತ್ರ ಸಮೇತ ವಿವರಿಸುವ ಪ್ರಯತ್ನವನ್ನೇ ತಮ್ಮ "ದೃಗ್ದರ್ಶನ" ಎಂಬ ಕೃತಿಯಲ್ಲಿ ಅನಸು ಮಾಡಿದ್ದಾರೆ. ಚಿತ್ರಕಲೆಯ ಸ್ಥಾನ, ಚಿತ್ರಾಂಕುರ, ಸಾಂದ್ರಚಿತ್ರಗಳು - ಎಂಬ ಅಧ್ಯಾಯಗಳಿಂದ ಪ್ರಾರಂಭಿಸಿ; ಜ್ಯೋಮಿತಿ ಚಿತ್ರಗಳ ನೆರವಿನಿಂದ ದೃಶ್ಯ ಚಿತ್ರರಚನೆ ಮಾಡುವವರೆಗೆ "ದೃಗ್ದರ್ಶನ"ದ ಅನೇಕ ಮಜಲುಗಳನ್ನು ತಿಳಿಯಾಗಿ, ಬಿಡಿಬಿಡಿಯಾಗಿ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಕಲಾಭಿರುಚಿ ಬೆಳೆಸಿಕೊಳ್ಳಬೇಕು ಎನ್ನುವವರಿಗೆ - ಒಂದು ಖಚಿತ ಜ್ಞಾನ ತಂದು ಕೊಡುವ ಪ್ರಯತ್ನ ಇಲ್ಲಿ ಅನಸು ಮಾಡಿದ್ದಾರೆ. ತಮ್ಮ ಕೃತಿಯ ಮುನ್ನುಡಿಯಲ್ಲಿ ಅವರೇ ಹೀಗೆ ಹೇಳಿಕೊಂಡಿದ್ದಾರೆ:

೪. ಕಲಾ, ಸಂ. ೪, ಸಂ. ೬, ಪು. ೧೫೬, ೧೯೩೨

"ಇಂಗ್ಲಿಷ್ ಭಾಷೆಯಲ್ಲಿ ಈ ಪರ್ಸ್ಪೆಕ್ಟೀವ್ ಚಿತ್ರಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳಿವೆ. ಕಲಾವಿದ ಲಿಯನಾರ್ಡೋ ವಿಂಚಿಯಿಂದ ಆರಂಭವಾಗಿ ಅನೇಕ ಕಲಾವಿದರು ಪಾಶ್ಚಿಮಾತ್ಯ ಭಾಷೆಗಳಲ್ಲಿ, ವಿಶೇಷವಾಗಿ ಇಂಗ್ಲಿಷಿನಲ್ಲಿ ದೃಗ್ದರ್ಶನ ಸಂಬಂಧ ಗ್ರಂಥಗಳನ್ನು ರಚಿಸಿರುವರು. ಹತ್ತೊಂಬತ್ತನೆಯ ಶತಮಾನದಲ್ಲಿಯೇ ಮಿ॥ ಎಲ್ಲೀಸ್, ವಿ. ಡೇವಿಡ್‌ಸನ್, ಜೆ. ಎ. ಸ್ಟೋರಿ, ಹೆಚ್. ಜೆ. ಡೆನ್ನಿಸ್ಕಿ, ಹೆಚ್. ಎಫ್. ಹಾರಿಸ್ ಮೊದಲಾದ ಮಹನೀಯರು ಪರ್ಸ್ಪೆಕ್ಟೀವ್ ಸಂಬಂಧ ಗ್ರಂಥಗಳನ್ನು ರಚಿಸಿ ಉಪಕಾರ ಮಾಡಿದ್ದಾರೆ. ನನ್ನ ಕಲಾವ್ಯಾಸಂಗ ಕಾಲದಲ್ಲಿ ಈ ಗ್ರಂಥಗಳನ್ನು ಶ್ರದ್ಧೆಯಿಂದ ವ್ಯಾಸಂಗ ಮಾಡಿ ಪ್ರಭಾವಿತನಾಗಿದ್ದೇನೆ. ಅವುಗಳ ಛಾಯೆ ನನ್ನೀ ದೃಗ್ದರ್ಶನ ಗ್ರಂಥದಲ್ಲಿ ಅಲ್ಲಲ್ಲಿ ಕಂಡು ಬರಬಹುದು. ಅವರೆಲ್ಲರ ಉಪಕಾರ ಸ್ಮರಿಸುವುದು ನನ್ನ ಕರ್ತವ್ಯ. ಕಲಾ ವ್ಯಾಸಂಗದ ಒಂದು ಭಾಗವಾದ ಈ ವಿಷಯಕ್ಕೆ ಸಂಬಂಧಿಸಿದ ಪುಸ್ತಕ ಕನ್ನಡದಲ್ಲಿ ಇಲ್ಲದುದರಿಂದ ಈ ಕಾರ್ಯವನ್ನು ಕೈಗೊಂಡೆ."[೫]

ಹೀಗೆಯೇ ಪತ್ರಚ್ಛೇದ, ಉಬ್ಬೆತ್ತುವುದು, ಭಂಗಾರದ ರೇಖು ಅಂಟಿಸುವುದು, ಪ್ರತಿಚಿತ್ರ ಲೇಖನ, ಹೊಳಹುಗಳು, ನಮೂನೆ ಮತ್ತು ಕಲ್ಪನಾ ಚಿತ್ರಗಳು, ತಾಮ್ರದಗಿಂಡಿ, ವಸ್ತುಚಿತ್ರ, ವರ್ಣಜ್ಞಾನ - ಮುಂತಾದ 'ಚಿತ್ರಕಲೆಯ ಹಂತಗಳು' ವಿವರಿಸುತ್ತಲೇ, ಕಲಾಭ್ಯಾಸಿಗಳಿಗೆ ಅನೇಕ ಸಲಹೆಗಳನ್ನು ಕೂಡಾ ಒಮ್ಮೆ ಪಟ್ಟಿಮಾಡಿ ಕೊಟ್ಟಿದ್ದಾರೆ. ('ಕಲಾ'. ಸಂ. ೬. ಸಂ. ೧. ಪು. ೫೧. ೧೯೩೨)

ಕೇವಲ ತಾಂತ್ರಿಕ ಪರಿಜ್ಞಾನಕ್ಕೆ ಸೀಮಿತ ಮಾಡಿಕೊಳ್ಳದೆ, ಇವಿಷ್ಟಿದ್ದು ಕಲಾಕೃತಿಗಳನ್ನು ಹೇಗೆ ಪರಿಭಾವಿಸಬೇಕು ಎಂಬುದಕ್ಕೆ ಉದಾಹರಣೆಯಾಗಿ ಫ್ರಾನ್ಸ್‌ನ ಕಲಾವಿದ ಗ್ರೂಸರ್‌ನ "ಪಾರಿವಾಳವನ್ನು ಹಿಡಿದ ಹುಡುಗಿ

೫. 'ದಿಗ್ದರ್ಶನ' (೧೯೭೩)

ಮತ್ತು ಪ್ರತಿಬಿಂಬ" ಎಂಬ ಎರಡು ಲೇಖನಗಳನ್ನು ಇಲ್ಲಿ ಗಮನಿಸಬಹುದು :

"ಈ ನಡುವಯಸ್ಸಿನ ಸುಂದರಿಯು ತೊಡೆಯ ಮೇಲೆ ಬುಟ್ಟಿಯಿಟ್ಟುಕೊಂಡು ಪಾರಿವಾಳಗಳೆರಡನ್ನು ಒಟ್ಟಿಗೆ ಹಿಡಿದಿರುವಳು. ಇದೀಗ ಚಿತ್ರದಲ್ಲಿ ಪ್ರಧಾನವಾಗಿ ಕಂಡುಬರುವ ಸನ್ನಿವೇಶ. ಈ ಸನ್ನಿವೇಶವನ್ನು ಸಹಜವಾಗಿ ಪರಸ್ಪರ ಪ್ರಮಾಣವಿರುದ್ಧವಿಲ್ಲದಂತೆ. ಪಕ್ಷಿಗಳ ಸಹಜವಾದ ಚಾಂಚಲ್ಯ ವ್ಯಕ್ತವಾಗುವಂತೆ ಚಿತ್ರಿಸಿರುವನು. ಆದರೆ ಕಲಾವಿದನು ಇಷ್ಟಕ್ಕೇ ತೃಪ್ತನಾಗದೆ ತರುಣಿಯು ಪಕ್ಷಿಗಳನ್ನು ಎಷ್ಟು ನಯವಾಗಿ ನಾಜೋಕಾಗಿ ಸ್ಪರ್ಶಿಸುತ್ತಿರುವಳು. ಆ ಪಕ್ಷಿಗಳ ಮೇಳನ ಮತ್ತು ಅವುಗಳ ಮೃದುವಾದ ತುಪ್ಪಳದ ಸ್ಪರ್ಶ ಇವುಗಳಿಂದ ಅವಳ ಮನೋಸಾಮ್ರಾಜ್ಯದಲ್ಲಾಗುವ ನೆನಪು. ಆಗಿನ ಮನೋವಿಕಾರ ಇವೆಲ್ಲವನ್ನೂ ಮೂರ್ತಿವತ್ತಾಗಿ ತೋರಿರುವನು. ತರುಣಿಯು ಕುಳಿತ ಒಲವು. ಅರೆಬಿರಿದ ಕಣ್ಣು. ಕಿರಿತೆರೆದ ಬಾಯಿ ಇವೆಲ್ಲವೂ ಆಕೆಯ ಮನೋಭಾವವನ್ನು ತೋರುತ್ತಿದೆ. ಪ್ರಧಾನ ಚಿತ್ರವು ಎದ್ದುಕಾಣುವಂತೆ ಮಾಡಲು ಮಂಕಾದ ಹಿಂಭಾಗವನ್ನಿಟ್ಟು ಮುಖದ ಮತ್ತು ಮಯ್ಯ ಮೇಲೆ ಬೇಕಾದಷ್ಟು ಬೆಳಕು ಬೀಳಿಸಿರುವನು. ಪ್ರೇಕ್ಷಕರ ನೋಟವನ್ನು ಮುಖದ ಕಡೆಗೆಳೆದು ಮನೋಭಾವವನ್ನು ತೋರಲು ಪಕ್ಷಿಗಳನ್ನು ತಂದೊಡ್ಡಿ ಮುಖದ ಸುತ್ತಲೂ ಕೂದಲನ್ನು ಇಳಿಯಬಿಟ್ಟಿರುವನು. ತರುಣಿಯು ಹಿಂಭಾಗಕ್ಕೆ ಹೊಂದಿಕೊಂಡಿರುವುದನ್ನು ತೋರಿಸಲು ಅಂಚನ್ನು ಮೃದುವಾಗಿ ಮಿಶ್ರಣ ಮಾಡಿರುವನು."[೬]

ಇದರಲ್ಲಿ 'ಚಿತ್ರ ಪರಿಚಯ' ಎಂದು ಮೇಲ್ನೋಟಕ್ಕೆ ಕರೆದಿದ್ದರೂ (ಆ ಕಾಲಕ್ಕೆ ಬಳಕೆಯಲ್ಲಿ ಇಲ್ಲದ) ಪ್ರಾಯೋಗಿಕ ವಿಮರ್ಶೆಯನ್ನು ನೆನಪಿಸುವಂತಹ ಲೇಖನಗಳೇ ಇವಾಗಿವೆ. ಅದೇ ರೀತಿ "ಟಸಕನ್

೬. ಚಿತ್ರಪರಿಚಯ, ಸಂ. ೪, ಸಂ. ೩, ಪು. ೯೫, ೧೯೩೭

ಕಲಾಪದ್ಧತಿ" ಬಗ್ಗೆ ಸುದೀರ್ಘ ಪರಿಚಯ ಲೇಖನ ಬರೆದು, ಆ ಕಲಾಪದ್ಧತಿಯ ಸ್ಯಾಂಡ್ರೊ ಬೊಟ್ಟಿ ಕೆಲ್ಲಿ ಎಂಬ ಕಲಾವಿದನ "ಕನ್ಯೆ ಮತ್ತು ಮಗು" ಎಂಬ ಕಲಾಕೃತಿಯ ಪರಿಚಯ ಕೂಡಾ ಒಮ್ಮೆ ಕೈಗೊಂಡಿದ್ದಾರೆ. (ಕಲಾ. ಸಂ. ೪, ಸಂ. ೭-೮, ೧೯೩೨)

ಈ ಬಗೆಯ ಕಲಾಕೃತಿಗಳ ಪರಿಚಯ - ವಿಚಾರ ಮಾಡುವಾಗ "ಇಂತಹ ಪ್ರತಿಭೆಯನ್ನು ತೋರುವುದರಲ್ಲಿ ಪೂರ್ವ ಪಶ್ಚಿಮ ದೇಶವೆಂಬ ಭೇದವೇನೂ ಅಡ್ಡಿ ಬರಲಾರದು" ಎಂಬ ನಿರ್ಣಯಕ್ಕೆ ಬಂದು ತಲುಪುತ್ತಾರೆ. ತಮ್ಮ ಕಲಾಸಾಹಿತ್ಯದ ಬರವಣಿಗೆಯ ಪ್ರಾರಂಭಕ್ಕೆ ನಾಡು-ರಾಷ್ಟ್ರದ ಕಲೆ, ಸಂಪ್ರದಾಯ, ಸಂಸ್ಕೃತಿ, ಮೌಲ್ಯಗಳ ಬಗ್ಗೆ ಅಪಾರ ಅಭಿಮಾನವನ್ನು ತೋರಿದ ಅನಸು, ಕೊನೆಕೊನೆಗೆ ಕಲೆಯ ಹಿರಿಮೆಗೆ, ಹಿರಿದಾದ ಕಲೆಗೆ ತಮ್ಮನ್ನು ತಾವೇ ಹೇಗೆ ಒಪ್ಪಿಸಿಕೊಂಡು ಬಿಡುತ್ತಾರೆ ಎಂಬುದು ಕಲೆ ಮತ್ತು ಹೃದಯ ಪರಿವರ್ತನೆಗೂ ಇರುವ ಅವಿನಾಭಾವ ಸಂಬಂಧದ ದ್ಯೋತಕವಾಗಿದೆ.

ಈವರೆಗೆ ಚರ್ಚಿಸಿದ ಲೇಖನಗಳೇ ಅಲ್ಲದೆ, ಇನ್ನು ಹಲವಾರನ್ನು ತಾವು ಹೊರತರುತ್ತಿದ್ದ "ಕಲಾ" ಎಂಬ ಪತ್ರಿಕೆಯಲ್ಲಿ, ಸುಮಾರು ೫ ವರ್ಷಗಳ ಕಾಲ ಬರೆದವರು ಅನಸು. ಆನಂತರವೂ ಆಗೀಗ್ಗೆ ಬದುಕಿರುವವರೆಗೆ ಲೇಖನಗಳನ್ನು ಬರೆಯುತ್ತಲೆ ಬಂದಿದ್ದಾರೆ. ಅಲ್ಲದೆ ಅಪ್ರಕಟಿತ ಬರವಣಿಗೆಕೂಡ ಸಾಕಷ್ಟು ಉಳಿದಿವೆ. ಇವೆಲ್ಲವನ್ನೂ ವಿಷಯಾನುಕ್ರಮವಾಗಿ, ಕಾಲಾನುಕ್ರಮವಾಗಿ - ಸಂಪುಟರೂಪದಲ್ಲಿ ಪ್ರಕಟಿಸುವ ಅಗತ್ಯವಿದೆ. ಹಾಗಾಗದೆ ಹೋದರೆ, ಇವತ್ತಿನ ಜನಾಂಗಕ್ಕೆ ಕನ್ನಡ ಭಾಷೆಯಲ್ಲಿ ಕಲೆಯ ಬೆಳವಣಿಗೆಯಲ್ಲಿ ನಿಜವಾಗಿ ನಡೆದ ವ್ಯವಸಾಯವೇನು ಹಾಗೂ ಅದಕ್ಕೆ ಪ್ರಮುಖವಾಗಿ ದುಡಿದ ವ್ಯಕ್ತಿಯ ಪರಿಶ್ರಮವೇನು ಎಂಬುದು ತಿಳಿಯದೆ ಅನ್ಯಾಯ - ಉಪೇಕ್ಷೆ ಮಾಡುವುದು ಇರಲಿ, ತಪ್ಪು ತೀರ್ಮಾನಗಳಿಗೆ, ಸುಳ್ಳು ಚರಿತ್ರೆಗೆ ಬರಹಗಾರರ ಸಂಕುಲ ತಲಪುವ ಸ್ಥಿತಿಯನ್ನು ನೋಡಬೇಕಾಗುತ್ತದೆ.

ಕಲಾಪತ್ರಿಕೋದ್ಯಮ

ಕನ್ನಡದ ಪತ್ರಿಕೆಗಳು ಎಂದಾಗ, ಈ ಶತಮಾನದಲ್ಲಿ ಹೊರಟ ಪತ್ರಿಕೆಗಳ ಪಟ್ಟಿ ಮಾಡಿ ಮುಗಿಸಲಾರದಷ್ಟು ಎನ್ನಬಹುದು. ಅವುಗಳಲ್ಲಿ ಯಾವ ಉದ್ದೇಶವೂ ಇಲ್ಲದ, ಇದ್ದರೆ ಪ್ರತಿಷ್ಠೆ - ಹಣ - ಜೀವನ ಹೊರೆಯಲಿಕ್ಕಾಗಿ ಎನ್ನಬಹುದಾದ ಪತ್ರಿಕೆಗಳ ಸಾಲೇ ದೊಡ್ಡದು. ಇನ್ನು ಎಲ್ಲೋ ಕೆಲವು : ಸಾಹಿತ್ಯ, ಸಂಗೀತ, ಕಲೆ, ನಾಟಕ, ಚಲನಚಿತ್ರ - ಕುರಿತು ಬಂದವು. ಅವುಗಳಲ್ಲಿಯೂ ಸಂಪಾದಕರ ಅಥವ ಮಾಲೀಕರ ವಿಚಾರದ ಎತ್ತರವನ್ನಾಗಲಿ, ಅನುಭವದ ಆಳವನ್ನಾಗಲಿ, ವಿಷಯದ ಪರಿಧಿಯನ್ನಾಗಲಿ ಗೌರವಿಸುವಂಥವೇನಲ್ಲ. ಅವು ಅವರವರ ಮನಸ್ಸು ಬುದ್ಧಿಗಳ ವ್ಯಾಸಸೃಷ್ಟಿಯೇ ಆದಂಥವು. ಹೀಗಿದ್ದೂ, ಶಿವರಾಮ ಕಾರಂತ ಅಂತಹವರು ಈ ಶತಮಾನದ ಎರಡನೇ ದಶಕದಲ್ಲಿಯೇ 'ವಸಂತ' ಎಂಬ ಪತ್ರಿಕೆ ನಡೆಸಿ ಸಾಹಿತ್ಯ, ಕಲೆ, ಸಂಸ್ಕೃತಿಗಾಗಿ ವಯಸ್ಸಿಗೆ ಮೀರಿ ಪ್ರಯತ್ನ ನಡೆಸಿದ್ದು ಕಾಣಿಸುತ್ತದೆ. ಎಷ್ಟು ಕಾಲ ಎಷ್ಟು ಸಂಚಿಕೆಗಳು ಬಂದವು ಎಂಬ ಲೆಕ್ಕಕ್ಕಿಂತ, ಗೋಪಾಲಕೃಷ್ಣ ಅಡಿಗರ "ಸಾಕ್ಷಿ", ಜಿ. ಬಿ. ಜೋಶಿ ಅವರ 'ಮನ್ವಂತರ' - ಯಾವ ಕಾಲಕ್ಕೂ ಒಂದು ಮಾದರಿ ಸಂಪುಟಗಳಾಗಿವೆ. ಅವು ಸಾಹಿತ್ಯ, ಕಲೆ, ಸಂಸ್ಕೃತಿಗಳಲ್ಲಿ ಯಾವ ರಂಗಕ್ಕೆ ಸೀಮಿತ ಎಂಬುದಕ್ಕಿಂತ, ಅವೆಲ್ಲವನ್ನು ಒಳಗೊಂಡೇ, ಭಾಷೆಯ ಆವಿಷ್ಕಾರದಲ್ಲಿ ಮಹತ್ವದ ಪಾತ್ರವಹಿಸಿವೆ ಎಂಬುದನ್ನು ಈಗಲೂ ತೆಗೆದುನೋಡಬಹುದು. ಈ ಬಗೆಯ ಪತ್ರಿಕೆಗಳು ಮತ್ತಾವ ಕ್ಷೇತ್ರದಲ್ಲಿಯೂ ಇವತ್ತಿನವರೆಗೆ ಕನ್ನಡದಲ್ಲಿ ಏಕೆ ಕಾಣಿಸಿಕೊಳ್ಳಲಿಲ್ಲ ಎಂಬುದಕ್ಕೆ ಕಾರಣ, ಮೇಲಿನ ಅಂಶಗಳಲ್ಲಿಯೇ ಅಡಗಿದೆ. ಆದರೂ ಅಲ್ಲಲ್ಲಿನ ಕಾಲಘಟ್ಟದಲ್ಲಿ ತನ್ನ ವ್ಯಾಪ್ತಿ ಮತ್ತು ಪರಿಮಿತಿಯಲ್ಲಿ ಕೆಲಸ ನಡೆಸಿದ ಪತ್ರಿಕೆಗಳು ಇವೆ ಎಂಬುದನ್ನೂ ಗಮನಿಸಲೇ ಬೇಕು.

ಕಾಲು ದಾರಿಗಳೇ ಇಲ್ಲದೆ ಹೆದ್ದಾರಿ ನಿರ್ಮಾಣ ಸಾಧ್ಯವಿಲ್ಲ. ಅಂತಹ ಪತ್ರಿಕೆಗಳಲ್ಲಿ ಈ ಶತಮಾನದ ಎರಡನೇ ದಶಕದ ಉತ್ತರಾರ್ಧದಲ್ಲಿ ಹೊರಟ ಅ.ನ.ಸುಬ್ಬರಾವ್ "ಕಲಾ" ಪತ್ರಿಕೆ ಕೂಡಾ ಮುಖ್ಯವಾದುದು.

ಪ್ರಾರಂಭಕ್ಕೆ ಕೆಲಕಾಲ ಶೀರ್ಷಿಕೆಯ ಅಡಿಯಲ್ಲಿ "ಕನ್ನಡನಾಡಿನ. ವಿದ್ಯಾ. ಲಲಿತಕಲೆ ಮತ್ತು ಕುಶಲ ವಿದ್ಯೆಗಳ ಸಚಿತ್ರ ಮಾಸಪತ್ರಿಕೆ" ಎಂಬ ವಿವರಣೆ ನೀಡುತ್ತಿದ್ದು. ಮುಂದೆ "ವಿದ್ಯಾ. ಲಲಿತಕಲೆ. ರಂಗಭೂಮಿ ಮತ್ತು ಕುಶಲ ವಿದ್ಯೆಗಳ ಮಾಸಪತ್ರಿಕೆ" ಯಾಗಿ ಕೊಂಚ ಬದಲಾದದ್ದು. ಸಂಪಾದಕ ಮಾಲೀಕ ಅನಸು ಬೆಳವಣಿಗೆಯೊ ಅಥವ ಸಮಕಾಲೀನ ಸಮಾಜದ ಪರಿಸ್ಥಿತಿ - ಒತ್ತಡವೆ ಅಂತಹದ್ದಾಗಿತ್ತೊ - ನಿರ್ಣಯಿಸಲಾರದಷ್ಟು ಕಠಿಣ ಸಂಗತಿ ಏನಲ್ಲ. ಕಲೆ ಎಂದರೆ ಕುಶಲ ಕಲೆ ಎಂದು ತಿಳಿದಿದ್ದ ಆ ಕಾಲದಲ್ಲಿ ಕುಶಲಕಲೆಯ ರಂಗಭೂಮಿ ಒಂದು ಎಂದೇ ಅಂದಿನ ರಸಿಕ ಸಮಾಜ ಪರಿಗಣಿಸಿತ್ತು ಎಂಬುದು ಈ ಸಂದರ್ಭದಲ್ಲಿ ಮನಗಾಣಬೇಕಾದ ಅಂಶ. ಆದರೆ ಸಚಿತ್ರ ಪತ್ರಿಕೆ ಹೋಗಿ ಕೇವಲ ಪತ್ರಿಕೆ ಎಂದಾಗಿದ್ದು. ಸಂಪಾದಕ ಮಾಲೀಕರಿಗೆ ಸಮಾಜ ವಿಧಿಸಿದ ಆರ್ಥಿಕ ಕಡಿವಾಣ ಎಂಬುದು. ಇನ್ನೂ ಬೆಳೆಯದ ಕನ್ನಡ ಓದುಗರ ಎಂದಿನ ಮಾನಸಿಕ ವ್ಯಾಪಾರ ಎಂಬುದು ಶೋಚನೀಯ. ಹೀಗಿದ್ದು. ಅನಸು ಕಂಡ ಕನಸು. ಆದರ್ಶ ದೊಡ್ಡದೆಂದೇ ಹೇಳಬೇಕು:

> "ನವಚೈತನ್ಯದ ಈ ನೂತನ ಯುಗದಲ್ಲಿ ಸರ್ವತೋಮುಖವಾದ ಬೆಳವಣಿಗೆಯು ಭಾರತದ ಎಲ್ಲ ಭಾಗದಲ್ಲಿಯೂ ವ್ಯಕ್ತವಾಗುತ್ತಿರುವುದು. ಉಜ್ವಲ ಸ್ವಾತಂತ್ರ್ಯಾಭಿಮಾನದೊಂದಿಗೆ ಸಂಸ್ಕೃತಿ ಕಲೆ ಮತ್ತು ಕುಶಲ ವಿದ್ಯೆಗಳ ಬೆಳವಣಿಗೆಯನ್ನು ಆಂಧ್ರ. ವಂಗ. ಪಂಜಾಬು ರಾಷ್ಟ್ರಗಳಲ್ಲಿ ಒಡೆದು ಮೂಡಿದಂತೆ ನೋಡಬಹುದು. ಕಲೆಯ ಖನಿಯಾಗುತ್ತಿದ್ದ ಕರ್ನಾಟಕದಲ್ಲಿ ಕಲೆಗಳು ಗಳಿತಾವಸ್ಥೆಯಲ್ಲಿದ್ದು ತಕ್ಕ ವ್ಯವಸಾಯವಿಲ್ಲದೆ ಸೊರಗುತ್ತಿವೆ. ಕೈಗಾರಿಕೆಗಳೂ (ಕುಶಲ ವಿದ್ಯೆಗಳೂ. ಮರಳುಕಾಡಿನ

ಜಲಾಶಯುಗಳಂತೆ ಅತಿವಿರಳ. ಜನಸಾಮಾನ್ಯರಲ್ಲಿ ಕಲಾಭಿಮಾನವೂ. ಉದ್ಯೋಗ ತತ್ಪರತೆಯೂ ಅಳಿಸಿಹೋಗಿರುವುದು. ನಮ್ಮ ವಿದ್ಯಾಶಾಲೆಗಳಾದರೂ ಕಾರಕೂನರನ್ನು ತಯಾರಿಸುವ ಕಾರಖಾನೆಯಾಗಿ ಪರಿಣಮಿಸಿವೆ. ಇಂತಹ ಪರಿಸ್ಥಿತಿಯಿಂದ ಪಾರಾಗಿ ಕರ್ನಾಟಕದ ಕೀರ್ತಿಯನ್ನುಳಿಸಲು ವಿದ್ಯಾವಂತರೂ. ಕಲಾಭಿಮಾನಿಗಳೂ. ನಡೆಸಬೇಕಾದ ಕಾರ್ಯಗಳು ಅನೇಕವಾಗಿವೆ. ಕಲಾಮಂದಿರವು ಈ ಭಾಗದಲ್ಲಿ 'ಅಳಿಲು ಭಕ್ತಿ ಮಳಲು ಸೇವೆ' ಎಂಬಂತೆ ಈ ಕಲಾಮಾಸ ಪತ್ರಿಕೆಯ ಮೂಲಕ ಕನ್ನಡಿಗರ ಸೇವೆ ಮಾಡಲು ಕಂಕಣ ಬದ್ಧವಾಗಿರುವುದು. ಈ ಪತ್ರಿಕೆಯು ಪ್ರಕೃತ ವಿದ್ಯಾ ವಿಭಾಗ. ಕಲಾಪ್ರಪಂಚ. ಮಹಿಳಾವೃಂದ. ವೃತ್ತಿ ಶಿಕ್ಷಣ. ನಿರುದ್ಯೋಗ ಸಮಸ್ಯೆ. ಮಹಿಳಾ ವಿಭಾಗ. ವಿಷಯ ವಿಮರ್ಶೆ. ಪ್ರಪಂಚ ಪರಿಚಯ. ದೇಶಾಭಿಮಾನ ಎಂಬ ಹೆದ್ದಾರಿಗಳನ್ನು ಹಿಡಿದು ಉದ್ಯೋಗ ಮಾಡಲು ಹೊರಟಿರುವುದು."[೧]

ಒಂದು ಮಗ್ಗಲಿಗೆ ರಾಷ್ಟ್ರೀಯತೆಯ ಚಳುವಳಿಯಲ್ಲಿ ದೇಸೀಯ ಒತ್ತಡ ಹೇಗೊ. ಹಾಗೆಯೇ ಕಲೆ ಎಂದಾಗ ವಿದ್ಯೆ. ಮಹಿಳೆ. ವೃತ್ತಿ. ನಿರುದ್ಯೋಗ ಮುಂತಾದ ಹತ್ತು ಹಲವು ಬೆಸೆದು ಕುಶಲಕಲೆ ಎಂಬ ಸ್ವರೂಪ ತಾಳಿತ್ತು. ಅ. ನ. ಸುಬ್ಬರಾಯರಂತಹವರಿಗೆ. ಎ. ಯಸ್. ಸುಬ್ಬರಾವ್, ಸಂಪಾದಕ. ಸುಬ್ಬಣ್ಣ. ನವಕುಸುಮ. ಕಶ್ಯಪ. ಚನ್ನಬಸವ. ಖಾದಿಯ ಅಣ್ಣಂದಿರು. ಕನ್ನಡ ಅಳಿಲು.... ಈ ಬಗೆ ಬಗೆಯ ತಂತಿಗಳ ಏಕತಾರಿಯಾಗಿ 'ಕಲಾ' ಸುಬ್ಬರಾವ್ ಮೂಡಿ ನಿಂತಿದ್ದಾರೆ.

ಮಕ್ಕಳಿಗೆ ಚಿತ್ರಕಲೆಯ ಪಾಠ ಹೇಗೊ. ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಿದ್ದಾರೆ. ಹಾಗೆಯೇ ತಮ್ಮ ವಿಚಾರ ವಿಮರ್ಶೆಗಳನ್ನು ಗಂಭೀರವಾಗಿ ತೋಡಿಕೊಂಡಂತಹ ಪುಟಗಳೂ ಸಂಚಿಕೆಗಳಲ್ಲಿ ಸಾಕಷ್ಟಿವೆ. ಅಲ್ಲಲ್ಲಿ ಕತೆಗಳು. ಪುಟ್ಟ ಸಂಭಾಷಣೆಗಳೇ ಅಲ್ಲದೆ ಸುದೀರ್ಘ ನಾಟಕಗಳನ್ನೂ

---

೧. ಕಲಾ, ಬಿನ್ನಹ, ಫೆಬ್ರುವರಿ ೧೯೩೦

ಸಾಕಷ್ಟು ನೀಡಿದ್ದಾರೆ ಅನಸು. ಇವೆಲ್ಲವೂ ಒಂದು ರೀತಿ ಅನಸು ಧ್ಯೇಯವಾದ ಸ್ವದೇಶಿ. ಸ್ವಾವಲಂಬನೆ ಹಾಗೂ ಸೌಂದರ್ಯ ಪ್ರಜ್ಞೆ ಎಂಬ ತ್ರಿವಳಿಗಳ ಏಕ ಸ್ವರೂಪವೇ ಆಗಿವೆ. ಅಲ್ಲಲ್ಲಿ ಚಿತ್ರಗಳಿಂದ. ಆಗಾಗ್ಗೆ ಕಲಾಕೃತಿಗಳಿಂದ ಕಣ್ಣು ಮನಸ್ಸು ಸೆಳೆಯುವ ಕೆಲಸ ಕೂಡ ಕೈಗೊಂಡಿದ್ದಾರೆ. ಕೆಲವೊಮ್ಮೆ ತಾವೇ ಆನಂದಕುಮಾರಸ್ವಾಮಿ. ಪೆರ್ಸಿಬ್ರೌನ್. ಜೆ. ಎನ್. ಅನ್‌ವಾಲಾ - ಅವರ ಲೇಖನಗಳನ್ನು ಅನುವಾದಿಸಿ : ಸ್ವದೇಶಿ. ಕಲೆಯ ಪ್ರಾಚೀನತೆ. ಛಾಯಾಚಿತ್ರಕಲೆಯ ಬಗೆಗೂ ಗಂಭೀರವಾಗಿ ಆಲೋಚಿಸುವಂತೆ ಅನಸು ಪ್ರಯತ್ನಿಸಿದ್ದಾರೆ.

ತಾವೇ ನಿಯೋಜಿಸಿದ ಅಖಿಲ ಭಾರತ ಕಲಾ ಪ್ರದರ್ಶನದಲ್ಲಿ ಸುವರ್ಣ ಪದಕ ಗೆದ್ದ ಅಬ್ದುರ್ ರಹಿಮಾನ್ ಚುಗ್‌ತಾಯ್ ಅವರ "ಷೇರ್‌ಜಾದ್" ಎಂಬ ವರ್ಣಚಿತ್ರವೊಂದನ್ನು "ಕಲಾ" ಸಂಚಿಕೆಯ ಆಗಸ್ಟ್ ೧೯೩೨ರಲ್ಲಿ ಪ್ರಕಟಿಸಿದ್ದಾರೆ ಅನಸು. ಅದಕ್ಕೆ ಪುಟ್ಟ 'ಚಿತ್ರ ಪರಿಚಯ' ಬರೆಯುತ್ತಾ: "ನಮ್ಮ ಈ ಬಡ ಪ್ರತಿಚಿತ್ರದಲ್ಲಿ ರಹಿಮಾನರ ಚಿತ್ರಕೌಶಲ ಸಾಮರ್ಥ್ಯವನ್ನಾಗಲೀ ವರ್ಣ ಚಮತ್ಕಾರವನ್ನಾಗಲೀ ಸರಿಯಾಗಿ ಅನುಭವ ಮಾಡಿಕೊಡುವುದು ಸಾಧ್ಯವಾಗಲಾರದು. ಆದರೂ ಅವರ ಚಿತ್ರದ ಸ್ಥೂಲ ಪರಿಚಯವಾದೀತೆಂದು ನಂಬಿರುವೆನು."[೨]

ಈ ಮಾತುಗಳು ಒಂದು ಕಡೆ ಸಂಪಾದಕ ಮಾಲೀಕರ ಆರ್ಥಿಕ ಸ್ಥಿತಿಯನ್ನು ಗುಟ್ಟಾಗಿ ಹೊರಹಾಕುವಾಗಲೇ, ಕಾಗದ ಮುದ್ರಣಗಳ ಪರಿಸ್ಥಿತಿಯ ಗುಣಮಟ್ಟವನ್ನೂ ಪರಿಚಯಿಸಿಕೊಡುತ್ತದೆ. ಅಂತಹದರಲ್ಲೂ ವರ್ಣಚಿತ್ರಗಳು. ರೇಖಾ ಚಿತ್ರಗಳು. ಅಲಂಕಾರದ ನಮೂನೆಗಳು, ಮುಖ್ಯವಾಗಿ ಜ್ಯೋಮಿತಿ ರಚನಾ ಚಿತ್ರಗಳನ್ನೂ ಸಾಕಷ್ಟು ಮುದ್ರಿಸಿರುವುದು. ಅನಸು ಪಟ್ಟಪಾಡಿನ ಹಾಡಾಗಿ ಕಾಣುತ್ತದೆ.

---

೨. ಈ ದಿನಗಳಲ್ಲೇ ವಿಸೀಯವರೂ, ತಮ್ಮ ಕಾವ್ಯ ಸಂಪುಟಗಳಿಗೆ ಕಲಾವಿದ ಕೆ. ವೆಂಕಟಪ್ಪನವರ ಕಲಾಕೃತಿಗಳನ್ನು ಬಳಸಿಕೊಳ್ಳುವಾಗ ಹೀಗೇ ಮರುಗಿದ್ದಾರೆ.

ತಾವು ಮಾತ್ರವೇ ಅಲ್ಲದೆ ತಮ್ಮ ಮನೆಯವರಾದ ಎಸ್. ಗೌರಮ್ಮ ಅವರಿಂದ ರಂಗವಲ್ಲಿ ಕಲೆಯ ಸಂಪಾದಕತ್ವದಲ್ಲಿ ಸಾಕಷ್ಟು ಪ್ರಮಾಣದಲ್ಲಿಯೆ ಪ್ರಕಟಿಸುವ ಕೆಲಸ ಕೂಡ ಮಾಡಿದ್ದಾರೆ ಅನಸು :

> "ಈ ರಂಗವಲ್ಲಿಯ ಕಲೆಯು ಬೊಂಬಾಯಿ, ಗುಜರಾತು ಮುಂತಾದ ಭಾಗಗಳಲ್ಲಿ ಸಜೀವ ಕಲೆಯಾಗಿರುವುದು. ನಮ್ಮ ಕರ್ಣಾಟಕದ ಎಲ್ಲ ಹಿಂದೂ ಮಂದಿರಗಳಲ್ಲಿಯೂ ಈ ಕಲೆಯು ಕಂಡು ಬರುತ್ತಿದ್ದರೂ ಇದು ಸತ್ವವಿಲ್ಲದ, ಅಸಡ್ಡೆಯ ಕಲೆಯಾಗಿರುವುದು. ಆದರೆ ಅಲ್ಲಲ್ಲಿ ಒಬ್ಬಿಬ್ಬರು ಈ ಕಲೆಯಲ್ಲಿ ಪ್ರಾಮುಖ್ಯವನ್ನು ಪಡೆದಿರುವರು. ಅವರಿಗೆ ಅವಕಾಶ ಕಲ್ಪಿಸುವುದಾದರೆ ಅವರ ಕಲಾ ನೈಪುಣ್ಯವು ಹೊರಬೀಳುವುದು. ಕಲಾಮಂದಿರದವರು ಹಿಂದೆ ನಡೆಸಿದ ರಂಗವಲ್ಲಿಯ ಸ್ಪರ್ಧೆಯಲ್ಲಿಯೂ, ಧಾರವಾಡದ ಡಿಸ್ಟ್ರಿಕ್ಟಿನ ಗುತ್ತಲ ಪ್ರದರ್ಶನದಲ್ಲಿ ನಡೆಸಿದ ಸ್ಪರ್ಧೆಯಲ್ಲಿಯೂ, ಅನೇಕ ಸ್ತ್ರೀಯರು ಅತ್ಯಲ್ಪ ಕಾಲದಲ್ಲಿ ಅನೇಕ ಉತ್ತಮ ಹಸೆಗಳನ್ನಿಕ್ಕಿದರು. ಕೆಲವು ಹಸೆಗಳಂತೂ ವರ್ಣನಾತೀತವಾಗಿದ್ದವು. ಆ ರೇಖಾ ಸರಳತೆಯೂ, ಸರ್ವಸಮತೆಯೂ, ಕೋಮಲ ಬಳ್ಳಿಗಳೂ, ಕ್ರಮವರಿತ ಸುರಳಿಗಳೂ, ಪ್ರೇಕ್ಷಕರನ್ನು ಬೆರಗು ಮಾಡುವಂತಿದ್ದವು."[೩]

ಹೀಗೆ ರಂಗವಲ್ಲಿಯಂತಹ ದೇಸೀಯ ಜನಪದಕಲೆಯ ಬಗೆಗೆ ಆಸಕ್ತಿ ಹುಟ್ಟಿಸುತ್ತಲೆ, ಅದಕ್ಕಾಗಿ ಕಲಾಮಂದಿರ ಅಂದರೆ ಅನಸು ಮಾಡಿದ ಪ್ರಯತ್ನ. ಆ ಕಲೆಯ ವೈಶಿಷ್ಟ್ಯ ವಿವರಿಸಿರುವುದು ಇಲ್ಲಿ ಗಮನಿಸಬಹುದು.

ಸಂಪಾದಕ ಮಾಲೀಕರಾದ ಅನಸು, ಮಹಿಳೆಯರಿಂದ ಮಾತ್ರವೇ ಅಲ್ಲ, ಪ್ರಸಿದ್ಧರು ಅಪ್ರಸಿದ್ಧರು ಎನ್ನದೆ, ತನ್ನ ಸುತ್ತಮುತ್ತಲ ಲೇಖಕರಿಂದ ಸಾಕಷ್ಟು ಬರವಣಿಗೆ ಮಾಡಿಸಿರುವುದು. ಪ್ರತಿ ಸಂಚಿಕೆಯಲ್ಲಿ

೩. ಕಲಾ, ಸಂ.೧, ಸಂ.೧, ಪು. ೧೨, ಫೆಬ್ರುವರಿ ೧೯೩೦

ಕಂಡು ಬರುತ್ತದೆ. ಉದಾ : ಯಸ್. ಜಿ. ಶಾಸ್ತ್ರಿಯವರ "ಮಾಯಾ ಪ್ರಪಂಚ ಅಥವ ನಮ್ಮ ಕಣ್ಣುಗಳನ್ನು ನಂಬಬಹುದೊ?" ಎಂಬ ೬ ಪುಟಗಳು. ರೇಖಾಚಿತ್ರಗಳನ್ನೂ ಒಳಗೊಂಡ ಒಂದು ವೈಜ್ಞಾನಿಕ ಲೇಖನ. ಕಣ್ಣು ಮತ್ತು ರೇಖೆ. ವಿಜ್ಞಾನ ಮತ್ತು ಕಲೆಯ ಸಂಬಂಧವನ್ನು ಈ ಪುಟ್ಟ ಲೇಖನಗಳಲ್ಲಿ ಅದೂ ಕನ್ನಡದಲ್ಲಿ ಸೊಗಸಾಗಿ ಮೂಡಿಬಂದಿದೆ. ಅದೇ ರೀತಿ. ಜಯರಾಮ ವೆಂಕಟಾಚಾರ್ಯ ಹಾಗೂ ಎಂ. ಜಿ. ಶಿಂಗ್ರೈಯ್ಯಂಗಾರ್ಯ ಅವರ "ಭರತ ಖಂಡದ ಕಲಾಕೌಶಲ್ಯ" ಎಂಬ. ಶಾಸ್ತ್ರಜ್ಞಾನಕ್ಕೆ ಸಂಬಂಧಿಸಿಯೂ ಕಲೆಯ ಕುರಿತ ಭಾರತೀಯರ ೧೨೫ ಪರಿಕಲ್ಪನೆಗಳನ್ನು ಸುದೀರ್ಘವಾಗಿ ವಿವರಿಸುವ ಧಾರವಾಹಿ ಲೇಖನ. (ಸಂ.೧. ಸಂ.೪. ಸಂ.೧. ಸಂ.೫ ಮತ್ತು ಸಂ.೧. ಸಂ.೨)

ಕಲಾವಿದರಿಗೆ ಸಂಬಂಧಿಸಿ. ಶ್ರೀ ಶಾರದಾನಂದ ಯೋಗೀಶ್ವರರ 'ರಾಜರವಿವರ್ಮರ ನೆನಪು' (ಸಂ.೧. ಸಂ.೩). 'ಇಟಲಿಯ ಕಲಾವಿದ ಮೈಕಲ್ ಆಂಜಲೋ' (ಸಂ.೧. ಸಂ.೧೧). 'ರೆಂಬ್ರಾಂಟ್ ಹಾಲೆಂಡ್ ಕಲಾವಿದ' (ಸಂ.೧. ಸಂ.೧೩) 'ರೂಬೆನ್ಸ್' ಕುರಿತು (ಸಂ.೩. ಸಂ.೧) - ಪೇಜಾವರ ಸದಾಶಿವ ರಾಯರು ಹಾಗೂ ಜಿ. ಶ್ರೀನಿವಾಸರಾವ್ ಅವರು ಬರೆದ ಪರಿಚಯ ಲೇಖನಗಳು ಕನ್ನಡ ಓದುಗರಿಗೆ ಹೊಸ ಬಗೆಯವೇ ಆಗಿವೆ.

ಹೆಚ್. ಭೀಮರಾಯರ 'ವ್ಯಾಪಾರದ ಮೇಲೆ ಈಗಿನ ರಾಜಕೀಯ ಚಳುವಳಿಯ ಪರಿಣಾಮ (ಸಂ. ೧. ಸಂ.೨). ಮನೆಗಳನ್ನು ಯಾರು ಕಟ್ಟಬೇಕು ? (ಸಂ.೧. ಸಂ.೯). ಬ್ಯಾಂಕುಗಳು ಬೇಕೇ ಬೇಡವೇ ? (ಸಂ. ೧. ಸಂ. ೧೦) - ಇಂತಹ ಲೇಖನಗಳಿಗೂ 'ಕಲಾ' ಪತ್ರಿಕೆಯಲ್ಲಿ ಅನಸು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಒಂದಲ್ಲ ಒಂದು ರೀತಿ ಕಲೆಗೆ ಇವುಗಳ ಸಂಬಂಧ ಕೂಡಾ ಕಲ್ಪಿಸಿ ಕೊಂಡಿದ್ದಾರೆ. ಜೀವನ ಕಲೆಗೆ ಇವುಗಳ ಅಗತ್ಯವಂತೂ ಇದೆ ಎಂಬುದು ಅನಸು ಒಪ್ಪಿಕೊಂಡ ಸಿದ್ಧಾಂತವೇ ಆಗಿದೆ.

ಹೀಗೆಯೇ ದೇವುಡು ನರಸಿಂಹಶಾಸ್ತ್ರಿ, ಪಿ. ಆರ್. ರಾಮಯ್ಯ, ಮಧುರಚೆನ್ನ, ತಿರುಮಲೆ ತಾತಾಚಾರ್ಯಶರ್ಮ, ಅ. ನ. ಕೃಷ್ಣರಾಯ, ಜಿ. ಪಿ. ರಾಜರತ್ನಂ, ಭಾರತೀಪ್ರಿಯ, ಎಸ್. ವಿ. ಪರಮೇಶ್ವರಭಟ್ಟ, ವಿ. ಕೃ. ಗೋಕಾಕ, ಟಿ. ಚೌಡಯ್ಯ, ಎಂ. ವೆಂಕಟಕೃಷ್ಣಯ್ಯ, ಬಿ. ಅಶ್ವತ್ಥನಾರಾಯಣರಾವ್, ಮ. ನ. ಮೂರ್ತಿ, ಶಿವರಾಮ ಕಾರಂತ, ಹೊಯಿಸಳ ಮುಂತಾದ ಲೇಖಕರ ಪಡೆಯನ್ನೇ 'ಕಲಾ' ಪತ್ರಿಕೆ ಪಡೆದಿತ್ತು ಎಂಬುದು ಪತ್ರಿಕೆಯ ಘನತೆಯನ್ನು ಎತ್ತಿ ತೋರಿಸುತ್ತದೆ.

ಕೇವಲ ಲೇಖನ, ಚಿತ್ರಗಳ ಪ್ರಕಟಣೆ ಮಾತ್ರವೆ ಅಲ್ಲದೆ ಕೆಲವೊಮ್ಮೆ ವಾಗ್ವಾದಕ್ಕೂ 'ಕಲಾ' ಸಂಚಿಕೆಗಳು ಅವಕಾಶ ಮಾಡಿಕೊಟ್ಟಿವೆ ಎಂಬುದು, ಪತ್ರಿಕೆಯ ಸಂಪಾದಕ ಮಾಲೀಕ ಅನಸು ಸಾಮರ್ಥ್ಯ ಹಾಗೂ ಆರೋಗ್ಯದ ಹಿರಿಮೆಯೇ ಆಗಿದೆ.

ಎಂ. ವಿ. ದೊರೆಸ್ವಾಮಿ ಐಯ್ಯಂಗಾರ್ ಅವರ 'ಸ್ತ್ರೀ ಸೌಂದರ್ಯ' (ಸಂ. ೧, ಸಂ. ೬) ಎಂಬ ಲೇಖನ ಪ್ರಕಟಿಸುತ್ತ, ಪ್ರಾರಂಭಕ್ಕೆ ಸಂಪಾದಕ ಅನಸು ೧೨ ಸಾಲುಗಳ ಒಂದು ಪುಟ್ಟ ಸಂಪಾದಕೀಯವನ್ನೇ ಬರೆದಿದ್ದಾರೆ:

"ಈ ಲೇಖನಕಾರರು ಕನ್ನಡ ನಾಡಿನಲ್ಲಿ ಹೆಸರಾದ ಸಾಹಿತ್ಯ ಸೇವಕರು. ಹಗಲಿರುಳು ಭಾಷಾಸೇವೆ ಮಾಡುವವರು. ಕಲಾಲೇಖನಕ್ಕೆ ಬೇಡಿದೊಡನೆಯೇ ಈ ಲೇಖನವನ್ನು ಕಳುಹಿಸಿಕೊಟ್ಟರು. ಈ ಲೇಖನವು ಉತ್ತಮ ವಿಷಯಗಳನ್ನೊಳಗೊಂಡಿದ್ದರೂ, ಅನೇಕ ಭಾಗಗಳಲ್ಲಿ ನಮ್ಮ ಅಭಿಪ್ರಾಯಕ್ಕೆ ವಿರೋಧವಾಗಿರುವುದು.... ಸತ್ಯ ಶೋಧನೆಯಲ್ಲಿ ಮುಚ್ಚುಮರೆಯು ಧರ್ಮವಲ್ಲವಾದುದರಿಂದ ಇದು ಕಲೆಯಲ್ಲಿ ಪ್ರಚುರಗೊಂಡಿದೆ."

ಸ್ತ್ರೀ ಮತ್ತು ಪುರುಷರ ಸೌಂದರ್ಯ ಮತ್ತು ಪ್ರಜ್ಞೆಗಳ ಬಗ್ಗೆ ಐಯ್ಯಂಗಾರರ - ಸಂಪಾದಕರ ಅಭಿಪ್ರಾಯಗಳೇ ಅಲ್ಲದೆ, ಮುಂದಿನ

ಎರಡು ಸಂಚಿಕೆಗಳಲ್ಲಿಯೂ ಸುದೀರ್ಘ ಪ್ರತಿಕ್ರಿಯಾ ಲೇಖನಗಳು ಪ್ರಕಟವಾಗಿವೆ. ಅದರಲ್ಲಿ 'ಚನ್ನಬಸವ' ಅಂಕಿತನಾಮದಿಂದ ಬರೆದಿರುವ ಬರಹ, ಬಹುಶಃ ಅನಸು ಅವರದೆಂದೇ ಆ ಶೈಲಿ - ವಿಚಾರಗಳಿಂದ ಸಹಜವಾಗಿ ಊಹಿಸಬಹುದು.

ಅದೇ ರೀತಿ ಅನಕೃ ಅವರ ಕೃತಿಗಳ ಬಗ್ಗೆ ಅನಸು ಅವರಿಗೆ, ಅನಸು ಕೃತಿಗಳ ಬಗ್ಗೆ ಅನಕೃ ಅವರಿಗೆ ಅಷ್ಟು ಒಳ್ಳೆಯ ಅಭಿಪ್ರಾಯ ಇರುವಂತೆ ಕಾಣುವುದಿಲ್ಲ. ಅನಸು ನಾಟಕ ಕುರಿತು ಅನಕೃ, ಅನಕೃ ಕೃತಿಗಳ ಪರಿಚಯ ವಿಮರ್ಶೆ ಸಂದರ್ಭದಲ್ಲಿ ಅನಸು ಅವರು, ನೇರವಾಗಿಯೇ ಕಟುವಾದ ಮಾತುಗಳನ್ನು ಬರೆದುಕೊಂಡಿದ್ದಾರೆ. ಆದರೂ ಅನಸು "ಕಲಾ" ಪತ್ರಿಕೆಯ ನಿರಂತರ ಬರಹಗಾರರು ಅನಕೃ ಎಂಬುದು, ಪರಸ್ಪರರ ಹೃದಯ ವೈಶಾಲ್ಯವನ್ನು ಎತ್ತಿ ತೋರುತ್ತದೆ. ಆ ಸಂದರ್ಭದಲ್ಲಿಯೇ, ಧರ್ಮದ ಬಗ್ಗೆ, ಭಾರತೀಯ ಸನಾತನ ಧರ್ಮದ ಬಗ್ಗೆ ಅಭಿಮಾನ ಪೂರ್ವಕವಾಗಿ ನಿಂತು ಅನಸು ಬುದ್ಧಿವಾದ ಹೇಳುವ ಪ್ರಯತ್ನ ನಡೆಸಿದ್ದಾರೆ. 'ಸಿ' ಎಂಬ ಸಂಕ್ಷಿಪ್ತ ಅಕ್ಷರದಿಂದ ಯಾರೇ ಬರೆದಿರಲಿ, ಪಂಡಿತ ತಾರಾನಾಥರ 'ಧರ್ಮಸಂಭವ' ಕುರಿತು 'ಕಲಾ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದೀರ್ಘ ವಿಮರ್ಶೆ ನೋಡಿದರೆ, ಅದಕ್ಕೆ ಸಂಪಾದಕರು ಯಾವ ಸಂಪಾದಕೀಯವನ್ನು ಸೇರಿಸದೆ ಇರುವುದರಿಂದ, ಒಂದು ರೀತಿ ತಮ್ಮ ಸಮ್ಮತಿಯಿಂದಲೇ ಆ ಲೇಖನ ಅಚ್ಚಾಗಿರುವಂತಿದ್ದು, ತುಂಬಾ ಕಠೋರವಾಗಿದೆ. ಧರ್ಮ ಕುರಿತು ವಿಚಾರ ಮಾಡುವುದೇ ಅವಹೇಳನಕಾರಿ ಎಂಬ ಧಾಟಿಯಲ್ಲಿ, ವಿಚಿತ್ರ ತರ್ಕವನ್ನೇ ಮಂಡಿಸಿ, 'ಧರ್ಮಸಂಭವ'ದ ಲೇಖಕರಿಗೆ ಬುದ್ಧಿವಾದ ಹೇಳಿದ್ದಾರೆ.

ಹೀಗೆ ಮಕ್ಕಳ ಕಲೆಯ ಶಿಕ್ಷಣದಿಂದ ಹಿಡಿದು ಧರ್ಮದ - ಜೀವನದ ವೈಚಾರಿಕ ನೆಲೆಯ ವಾಗ್ವಾದದವರೆಗೆ ತಮ್ಮ 'ಕಲಾ' ಸಂಚಿಕೆಯ ಪುಟಗಳನ್ನು ಒಳಗೊಳ್ಳುವ, ವಿಷಯ ಬಾಹುಳ್ಯದಿಂದ ಕಲಸುಮೇಲೊಗರದಂತೆ ಕಂಡು ಬರುತ್ತದೆ. ವೈವಿಧ್ಯತೆಯ ಜೊತೆಗೆ

ಸುವ್ಯವಸ್ಥೆಯೂ ಇದ್ದು. ಅಚ್ಚು ಕಟ್ಟಿನೊಂದಿಗೆ ಗುಣಮಟ್ಟವು ಇನ್ನಷ್ಟು ಮೇಲ್ಮಟ್ಟದ್ದಾಗಿದ್ದರೆ ಪತ್ರಿಕೆಯ ಘನತೆ ಹೆಚ್ಚುತ್ತಿತ್ತು. ಆದರೂ ಅನಸು ಪ್ರಯತ್ನ. ಉದ್ದೇಶ ಕೀಳಾದುದೂ ಅಲ್ಲ. ಕಿರಿದಾದುದೂ ಅಲ್ಲ.

ಇಷ್ಟಾಗಿ ಕನ್ನಡ ನಾಡಿನ ಓದುಗರ ನಿರಾಶಾದಾಯಕ ಪ್ರೋತ್ಸಾಹದ ಫಲವಾಗಿ. ಸಾಂಸ್ಕೃತಿಕ ಪತ್ರಿಕೆಗಳಿಗೆ ಸಾಮಾನ್ಯವಾಗಿ ಒದಗುವ ಆರ್ಥಿಕ ಕೊರತೆಯ ಫಲಶ್ರುತಿಯಿಂದ. ಕೇವಲ ಐದು ವರ್ಷಗಳಲ್ಲಿಯೇ ಅನಸು ‘ಕಲಾ’. ಪತ್ರಿಕೋದ್ಯಮಕ್ಕೆ ವಿಧಾಯ ಹೇಳಬೇಕಾಗಿ ಬಂದಿತು.

ಕಲಾಸಂಘಟಕ

ಶಿಕ್ಷಕನ ಒಳಗೆ ಒಬ್ಬ ಸಂಘಟಕ ಇರುತ್ತಾನೊ ಇಲ್ಲವೊ. ಆದರೆ ಸಂಘಟಕನ ಒಳಗೆ ಒಬ್ಬ ಶಿಕ್ಷಕ ಅಡಗಿರುತ್ತಾನೆ. ಸಂಗಾತಿಗಳಿಂದ ತಾನು ಕಲಿಯುತ್ತಲೂ ಇರುತ್ತಾನೆ ಕಲಿಸುತ್ತಲೂ ಇರುತ್ತಾನೆ. ಹೀಗೆ. ಕಲಿಯುವುದು ಮತ್ತು ಕಲಿಸುವುದರ ಮುಖೇಣವೆ ಜೀವನವನ್ನು ಎದುರಿಸುವುದು. ತನ್ನ ಉದ್ದೇಶ - ಗುರಿ ಸಾಧನೆಗೆ ಪ್ರಯತ್ನಿಸುವುದು ನಡೆಯುತ್ತದೆ. ಈ ಮೂಲಕ ತನ್ನ ಆಶೋತ್ತರಗಳನ್ನು ಪೂರ್ಣ ಈಡೇರಿಸಿಕೊಳ್ಳುವುದಾಗಲಿ. ಬದಲಾಯಿಸಿಕೊಳ್ಳುವುದಾಗಲಿ ಎಂಬ ಪ್ರಶ್ನೆ ಮುಖ್ಯವಾಗದೆ. ತನ್ನ ರಂಗಕ್ಕಾಗಿ ಕೈಗೊಂಡ ಪಯಣದಲ್ಲಿ ಏನೆಲ್ಲ ಎದುರಿಸಿ ನಿಂತದ್ದೇ ಮುಖ್ಯವಾಗುತ್ತದೆ. ವ್ಯಕ್ತಿಯ ಬೆಳವಣಿಗೆ. ರಂಗದ ಬೆಳವಣಿಗೆ ಮುಖೇಣವೆ ಒಂದು ಸಮಾಜದ ಕಾಲಕ್ಕೂ ಇದೇ ಮಾದರಿಯಾಗುವ ಹಂತ ಮುಟ್ಟುತ್ತದೆ. ಇಂತಹ ಸಂಘಟನೆಯ ಗುಣ ಕಲಾರಂಗದಲ್ಲಿ ಅನಸುಬ್ಬರಾಯರು ಈ ಶತಮಾನದ ಎರಡನೆ ದಶಕದಲ್ಲೆ ಮನಗಂಡಿದ್ದರು. ಒಳಗೊಂಡಿದ್ದರು ಎಂಬುದು ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಯಿಂದ ಮಹತ್ವದ್ದು.

೧೯೧೯ ಆಗಸ್ಟ್ ೧೨ರಂದು. ಬೆಂಗಳೂರಿನಲ್ಲಿ ಸ್ವಯಂ ಉದ್ಯೋಗ. ಅದರೊಂದಿಗೆ ಆಶಿಸಿದ ವಿದ್ಯಾರ್ಥಿಗಳಿಗೆ ಕಲಾ ಶಿಕ್ಷಣವನ್ನು ಅನಸು ಪ್ರಾರಂಭಿಸಿದರು. ಹೀಗೇ ಮೂರು ವರ್ಷ ಸಾಗಿದಾಗ. ಶಂಕರರಾವ್ ಎಂಬ ಯುವಕ. ಕೈಹಿಡಿದ ಪ್ರೇಯಸಿಯೊಂದಿಗೆ ಆಶ್ರಯ ಬಯಸಿ ಅನಸು ಅವರಲ್ಲಿಗೆ ಬಂದರು. ಕಲ್ಲಿಕೋಟೆಯಲ್ಲಿ ಇದ್ದ ಕೆಲಸ ಬಿಟ್ಟು ಬಂದಿದ್ದ ಆತನಿಗೆ. ಕಾರ್ಡುಬೋರ್ಡ್ ಪೆಟ್ಟಿಗೆ ಮಾಡುವ ಕಸುಬು ಬರುವುದು ತಿಳಿಯಿತು. ಅನಸು ಅವರಲ್ಲಿದ್ದ ಸಂಘಟಕ.

ಸಂಘಟಕನೊಳಗಿದ್ದ ಶಿಕ್ಷಕ ಎಚ್ಚೆತ್ತು, ಆ ದಂಪತಿಗಳಿಗೆ ಊಟ, ವಸತಿಗೆ ಆಶ್ರಯ ಕಲ್ಪಿಸಿ, ಕೆಲಸ ಶುರುಮಾಡಲು ಬಂಡವಾಳ ಕೂಡ ಒದಗಿಸಿದರು. ಇದರಿಂದ ವಾರದಲ್ಲಿ ಅಂಗಡಿಯ ತುಂಬ ಬಗೆಬಗೆಯ ಖಾದಿಯ ಕೈ ಪೆಟ್ಟಿಗೆಗಳು. ಜನರಿಗೆಲ್ಲ ಅಚ್ಚರಿಗೊಳ್ಳುವಂತಹ ಮಾರ್ಪಾಟು. ಒಳ್ಳೆಯ ವ್ಯಾಪಾರ. ಅಂದಿನ ಗಯಾ ಕಾಂಗ್ರೆಸ್ಸಿನ ಸ್ವದೇಶಿ ಖಾದಿಯ ವಸ್ತು ಪ್ರದರ್ಶನದಲ್ಲಿ ಬೆಂಗಳೂರು ಕಲಾಮಂದಿರದ ಪೆಟ್ಟಿಗೆಗಳ ಪ್ರದರ್ಶನ. ಪ್ರದರ್ಶನ ಉದ್ಘಾಟಿಸಿದ ಮೋತಿಲಾಲ್ ನೆಹರು ಅವರಿಗೆ ಖಾದಿ ಸೂಟ್‌ಕೇಸ್ ಕೂಡ ಅನಸು ಉಡುಗೊರೆಯಾಗಿ ನೀಡಿದರು. ಹೀಗೆ, ಕಲಾಮಂದಿರದಲ್ಲಿ ೧೯೨೨ನೇ ಇಸವಿ ಪೂರ್ತಾ ಉತ್ಸಾಹದ ತುಳುಕಾಟ. ಅಷ್ಟರಲ್ಲಿ ಶಂಕರರಾವ್ ಅವರ ಪತ್ನಿ ತೀರಿಕೊಂಡು, ಊರನ್ನೇ ಬಿಟ್ಟು ಹೋದರು. ಅಲ್ಲಿಗೆ ಆ ಕಸಬಿಗೆ ಇತಿಶ್ರೀ ಹಾಡಬೇಕಾಯಿತು.

ಪ್ರಕರಣ ಮೊದಲಿನದು. ಘಟನೆಗಳು ಮತ್ತೆ ಮತ್ತೆ. ಕಲಾ ಸಂಘಟಕ ಅನಸು ಜೀವಮಾನ ಪರ್ಯಂತ. ಮುಕ್ತಾಯ ಹೀಗೇ ಅಲ್ಲದಿರಬಹುದು. ಅನುಭವ ಪರಿಣಾಮ ಮಾತ್ರ ಒಂದೇ. ಪ್ರಾರಂಭಕ್ಕೆ ಕೇವಲ ೪ ಜನ ವಿದ್ಯಾರ್ಥಿಗಳಿಂದ ಪ್ರಾರಂಭವಾಗಿ, ಹತ್ತು ವರ್ಷಗಳ ಹೊತ್ತಿಗೆ ೪೨ ಜನ ವಿದ್ಯಾರ್ಥಿಗಳಿಂದ ಕಲಾಮಂದಿರ ತುಂಬಿಹೋಯಿತು. ಅದರಲ್ಲಿ ೩೫ ಜನ ಪರೀಕ್ಷೆಗೆ ಕುಳಿತರೆ, ೩೨ ಜನ ಉತ್ತೀರ್ಣರಾಗುತ್ತಿದ್ದರು ಎಂಬುದು ಎಷ್ಟು ಮುಖ್ಯವೊ ೩ ಜನಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿತ್ತು ಎಂಬುದು ಅಷ್ಟೇ ಮುಖ್ಯ. ಒಂದು ಕಡೆ, ಕಲಾಮಂದಿರದ ವ್ಯವಸ್ಥಾಪಕ ಅನಸು, ಹೀಗೆ ಆಗಿನ ಸಂದರ್ಭ ನೆನೆಯುತ್ತಾರೆ :

"ಕಲಾಮಂದಿರ ಮೊದಲಿನಿಂದ ವಿಶಾಲ ಕರ್ನಾಟಕ ದೃಷ್ಟಿಯಿಂದ ಕಾರ್ಯ ಯೋಜನೆಗಳನ್ನು ಕೈಗೊಳ್ಳುತ್ತ ಬಂದಿದೆ. ಗುತ್ತಲಗ್ರಾಮದಿಂದ ಬಂದ ಬಿ. ಜಿ. ಕುಲಕರ್ಣಿ ಮತ್ತು ಹೆಚ್. ಬಿ. ಬಂಡಿವಾಡ್ ಹಾಗೂ ಬಳ್ಳಾರಿಯಿಂದ ಬಂದ ಶ್ರೀ ಗುರು

ಇವರು ವ್ಯವಸ್ಥಾಪಕರ ಮನೆಯಲ್ಲಿಯೇ ಇದ್ದು ತಮ್ಮ ಕಲಾ ವ್ಯಾಸಂಗವನ್ನು ಮುಂದುವರಿಸಿದರು. ಬಿ. ಜಿ. ಕುಲಕರ್ಣಿಯವರು ವ್ಯಾಸಂಗ ಮುಗಿದ ನಂತರ ಓಂತಿರುಗಿ ಕಲೆಯನ್ನು ವೃತ್ತಿಯಾಗಿ ಕೈಗೊಂಡರು. ಹಾನಗಲ್ ಮತ್ತು ಗುತ್ತಲದಲ್ಲಿ ಕಲಾ ಪ್ರದರ್ಶನ ಏರ್ಪಡಿಸಿ ಕಲಾಮಂದಿರದ ವ್ಯವಸ್ಥಾಪಕರು ಪ್ರದರ್ಶನವನ್ನು ಉದ್ಘಾಟಿಸಲು ಆಹ್ವಾನಿಸಿದರು. ಶ್ರೀಯುತ ಬಂಡಿವಾಡರು ಇಂದೂ ಧಾರವಾಡದಲ್ಲಿ ಕಲಾಧ್ಯಾಪಕರಾಗಿರುವರು. ಕಲಬುರುಗಿಯಿಂದ ಶ್ರೀ ಆಲೂರು ವೆಂಕಟರಾಯರಿಂದ ಪತ್ರ ತಂದು ಕಲಾ ಶಾಲೆಗೆ ಸೇರಿ ಎರಡು ವರುಷದಲ್ಲಿ ಅಸದೃಶ ಕಲಾಪ್ರತಿಭೆ ತೋರಿದ ಶ್ರೀ ಮಾರ್ತಾಂಡ ಜೋಷಿಯವರ ಇಷ್ಟದಂತೆ ಶಾಂತಿನಿಕೇತನದಲ್ಲಿ ಕಲಾ ವ್ಯಾಸಂಗ ಮಾಡಲು ಕಳುಹಿಸಿಕೊಡಲಾಯಿತು. ಹಾನಗಲ್ಲಿನಿಂದ ಬಂದ ಶ್ರೀನಿವಾಸರಾವ್ ಹಾನಗಲ್ ಮೂರು ವರುಷ ಕಲಾಮಂದಿರದಲ್ಲಿ ವ್ಯಾಸಂಗ ಮಾಡಿ ಅನಂತರ ಮೈಸೂರಿನಲ್ಲಿ ವ್ಯಾಸಂಗವನ್ನು ಮುಂದುವರಿಸಿದರು. ಇವರು ಇಂದು ಹುಬ್ಬಳ್ಳಿಯಲ್ಲಿ ಕಲಾಧ್ಯಾಪಕರಾಗಿರುವವರು. ಇದೇ ರೀತಿ ಮಂಗಳೂರು - ಹೈದರಾಬಾದು ಕರ್ನಾಟಕದಿಂದಲೂ ಅನೇಕ ವಿದ್ಯಾರ್ಥಿಗಳು ಬಂದು ವ್ಯಾಸಂಗ ಮಾಡಿರುವವರು."[1]

ಕೇವಲ ವಿಶಾಲ ಕರ್ನಾಟಕದ ದೃಷ್ಟಿ ಮಾತ್ರವೆ ಏನು. ಪಿ. ಎಸ್. ರಾವ್ ಅಂತಹ ಕಲಾವಿದರು. ಮೊದಲಿಗೆ ಕಲಾಮಂದಿರದ ವಿದ್ಯಾರ್ಥಿಯೇ ಆಗಿ. ಹೊರರಾಜ್ಯಕ್ಕೆ ಹೋಗಿ ಬಂದು. ಕಲಾಮಂದಿರದ ಶಿಕ್ಷಕ ಜವಾಬ್ದಾರಿ ತಾವಾಗಿಯೇ ಹೊತ್ತು. ದೆಹಲಿಗೆ ಹೋಗಿ ಆತ್ಮಹತ್ಯೆ ಮಾಡಿಕೊಳ್ಳುವವರೆಗೂ ಅ. ನ. ಸುಬ್ಬರಾಯರಿಗೂ ಪಿ. ಸುಬ್ಬರಾಯರಿಗೂ ಇದ್ದ ಸಂಬಂಧ ಗಾಢವಾದುದು. ಕರ್ನಾಟಕದ

೧. ಕಲಾಮಂದಿರದ ಇತಿಹಾಸ, ಪ್ರಾರಂಭದ ಹತ್ತು ವರುಷಗಳ ವರದಿ, "ಕಲಾ ನಿವೇದನ". ಪುಟ ೧೫೭-೮, ೧೯೬೯.

ಪ್ರತಿಭಾವಂತ ಕಲಾವಿದರಲ್ಲಿ ಪಿ. ಸುಬ್ಬರಾವ್ ಅವರೂ ಒಬ್ಬರಾಗಿದ್ದು, ಆಗಿನ ಕಲಾಮಂದಿರದ ದಿನಗಳು, ಕಲಾಶಿಕ್ಷಣದ ಇತಿಹಾಸದಲ್ಲಿ ಪ್ರಮುಖವಾದ ಘಟ್ಟವೇ ಆಗಿತ್ತು ಎಂಬುದನ್ನು ಕಾಣಬಹುದು. ವೆಂಕಟಪ್ಪನವರಿಂದ ಬಂಗಾಳಿಶೈಲಿ ಕಲೆಯ ರೂಪದಲ್ಲಿ ಕರ್ನಾಟಕಕ್ಕೆ ಅಡಿ ಇಟ್ಟರೂ, ನಾರಾಯಣ ಸಂಗಮ - ಅ. ನ. ಕೃ. ಅಂತಹವರಿಂದ ಕೊಂಚ ಪ್ರಚಾರವಾದರೂ, ಒಂದು ಮಾದರಿಯಾಗಿ ಆಕೃತಿ ಆಶಯಗಳಿಂದ ಗಾಢವಾದ ಪ್ರಭಾವ ಬೀರಿದ್ದು ಆಧುನಿಕರಾದ ಪಿ. ಸುಬ್ಬರಾವ್ ಅವರಿಂದಲೆ. ಇದಕ್ಕೆ ಪ್ರೋತ್ಸಾಹಕರಾದ ಶಿಕ್ಷಕ ಸಂಘಟಕರು ಅ. ನ. ಸುಬ್ಬರಾವ್ ಎಂಬುದೂ ಗಮನಿಸಬೇಕಾದ ಅಂಶ.

ಕಲಾಮಂದಿರ ಪ್ರಾರಂಭಿಸುವ ಮುಂಚೆಯೇ, ವಿಶ್ವೇಶ್ವರಯ್ಯನವರ ಮಾರ್ಗದರ್ಶನದಿಂದ, ಆರ್.ಕಲ್ಯಾಣಮ್ಮನವರ ಶಾರದಾ ಸ್ತ್ರೀ ಸಮಾಜದಲ್ಲಿ ಕರಕುಶಲ ಶಿಕ್ಷಕರಾಗಿ ಕೇವಲ ೬ ತಿಂಗಳು ತರಬೇತಿ - ನೀಡಿ, ಮಹಿಳೆಯರಲ್ಲಿರುವ ಕಲಾ ಪ್ರತಿಭೆಗೆ ಮಾರು ಹೋಗಿದ್ದವರು ಅನಸು. ಮುಂದೆ ಕಲಾಮಂದಿರದಲ್ಲಿಯೇ ಶಿಕ್ಷಣ ಪಡೆದು ಕಲಾವಿದರಾದವರು, ಕಲಾಭಿರುಚಿ ಬೆಳೆಸಿಕೊಂಡು ಶಿಕ್ಷಕ ಸಂಘಟಕ ಅನಸು ಅವರಿಗೆ ಮಾರು ಹೋದವರು ಹಲವರು. ಎಂ. ಎಸ್. ಕನಕ (ಅನಂತರ ಕನಕಮೂರ್ತಿ) ಅವರು, ಅನಸು ವಿದ್ಯಾರ್ಥಿಯಾಗಿದ್ದು, ನಂತರ ವಾದಿರಾಜರಲ್ಲಿ ಮರ ಮತ್ತು ಶಿಲ್ಪ ಕೃತಿಗಳ ಶಿಲ್ಪಿಯಾಗಿ ಅಭ್ಯಾಸ ಮುಂದುವರಿಸಿ, ನಾಡಿನಲ್ಲಿಯೇ ಹೆಸರು ಪಡೆದರು. ಹಾಗೆಯೇ ಪ್ರಾರಂಭದ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಪಿ. ಆರ್. ಕಮಲಮ್ಮ ಅವರು, ಮಲ್ಲೇಶ್ವರದಲ್ಲಿ ಸ್ವತಃ 'ಲಲಿತ ಕಲಾ ಶಾಲೆ' ತೆರೆದು (೧೯೩೯) ಕಲಾಕ್ಷೇತ್ರದಲ್ಲಿ ಸೇವೆಸಲ್ಲಿಸುತ್ತ ಬಂದವರು. ಅವರಿಗೆ ಎಲ್ಲ ರೀತಿಯ ಪ್ರೋತ್ಸಾಹ ನೀಡಿದವರು ಸಂಘಟಕ ಅನಸು. ತಮ್ಮದೇ ಶಾಲೆ ಎಂದೇ ತಿಳಿದವರು.

ಸರಕಾರದ ನೆರವಿಲ್ಲದೆ ಪುಟ್ಟ ಹಾಗೂ ಬಡ ಸ್ವತಂತ್ರ ಸಂಸ್ಥೆಯಾದ ಕಲಾಮಂದಿರವು ೧೯೨೧ರಲ್ಲಿ ಅಖಿಲ ಭಾರತ ಕಲಾ ಪ್ರದರ್ಶನ ಏರ್ಪಡಿಸಿತ್ತು ಎಂಬುದು. ಸಂಘಟಕ ಅನಸು. ಕಲಾಪ್ರಪಂಚದ ವ್ಯಾಪ್ತಿಯ ಅರಿವಿಗೆ ಸಂಕೇತವಾಗಿದೆ. ಅಂತೆಯೇ ೧೯೨೭ ಹಾಗೂ ೧೯೨೯ರಲ್ಲಿ ಎರಡು ಮತ್ತು ಮೂರನೆಯ ಅಖಿಲ ಭಾರತ ಕಲಾಪ್ರದರ್ಶನಗಳನ್ನು ಮೊಟ್ಟ ಮೊದಲಿಗೆ ಏರ್ಪಡಿಸಿದ ಕೀರ್ತಿ. ಯಶಸ್ಸು ಅನಸು ಅವರದು. ಇವುಗಳ ಪರಿಣಾಮ ನಾನಾ ಬಗೆಯದು.

ಕಲಾ ಪ್ರದರ್ಶನದಿಂದ ಕಲಾಕೃತಿಗಳ ಮಾರಾಟವಾಗುತ್ತಿದ್ದದ್ದು ಉದ್ದೇಶ ಈಡೇರಿಕೆಗಳಲ್ಲಿ ಮುಖ್ಯವಾದ ಅಂಶ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅಂತಹ ಬರಹಗಾರರು ಕಲಾವಿದ ನಾರಾಯಣ ಸಂಗಮರ "ಮುತ್ತುಗದ ಹೂ" ಎಂಬ ಕೃತಿಯನ್ನು ಕ್ರಯಕ್ಕೆ ಕೊಂಡರು. ಸಿ. ರಾಜಗೋಪಾಲಾಚಾರ್ಯರು ವಿಶೇಷ ಆಹ್ವಾನದ ಮೇರೆಗೆ ಪ್ರದರ್ಶನಕ್ಕೆ ಭೇಟಿ ನೀಡಿ. ಕಲಾವಿದ ಸೀತಾರಾಮಯ್ಯನವರ ಕೃತಿ ಮೆಚ್ಚಿಕೊಂಡು, ಅಚ್ಚು ಮಾಡಿಸಲು ಸಲಹೆ ನೀಡಿ. ಅವುಗಳ ಪ್ರತಿಚಿತ್ರ ತಯಾರಿಸಿಕೊಡಲು ಕೋರಿದ್ದರು. ಇದರ ಪರಿಣಾಮ. ಕಲಾವಿದ ಸೀತಾರಾಮಯ್ಯನವರಿಗೆ ಅರಸು ಬೋರ್ಡಿಂಗ್ ಗರ್ಲ್ಸ್ ಹೈಸ್ಕೂಲಿನಲ್ಲಿ ಕಲಾಧ್ಯಾಪಕ ಕೆಲಸ ದೊರೆಯಿತು.

ಕೇವಲ ಪೋಸ್ಟ್ ಕಾರ್ಡಿನ ಮನವಿಗೆ ದಿವಾನರಾದ ಮಿರ್ಜಾ ಇಸ್ಮಾಯಿಲ್ ಅವರು ಪ್ರದರ್ಶನಕ್ಕೆ ಭೇಟಿ ನೀಡಿ. ಮೆಚ್ಚಿ. ಕಲಾಮಂದಿರಕ್ಕೆ ಅನುದಾನಕ್ಕೆ ಆದೇಶ ನೀಡಿದರು. ಹೀಗೆ ಮೊದಲ ಕಲಾಪ್ರದರ್ಶನದಿಂದ ಸಂಘಟಕ ಅನಸು ಅವರ ಪ್ರಯತ್ನದಿಂದ. ಸಾಹಿತಿಗಳಿಂದ ದಿವಾನರವರೆಗೆ ನಾನಾ ಕ್ಷೇತ್ರಗಳ ಸಾರ್ವಜನಿಕರು ಕಲಾಪ್ರದರ್ಶನದಲ್ಲಿ ಸಕ್ರಿಯವಾಗಿ ಪಾಲುಗೊಂಡರು.

ಈ ಉತ್ತೇಜನದಿಂದಲೇ ೨ ಮತ್ತು ೩ನೇ ಅಖಿಲ ಭಾರತ ಕಲಾಪ್ರದರ್ಶನವನ್ನು ಸಂಘಟಕ ಅನಸು ಏರ್ಪಡಿಸಿದ್ದರು. ಆ ಕಾಲಕ್ಕೆ

ಲಲಿತಕಲೆ ಎಂದರೆ ಕುಶಲ ಕಲೆಯೇ ಆಗಿದ್ದು. ಪ್ರದರ್ಶನದಲ್ಲಿ ಪ್ರಾಚೀನ ಕಲಾ ಸಂಗ್ರಹ ಹಾಗೂ ನಾನಾ ಕುಶಲ ಕಲೆಗಳನ್ನು ಸ್ಥಳದಲ್ಲಿಯೇ ಮಾಡಿತೋರಿಸಲಿಕ್ಕೂ ವ್ಯವಸ್ಥೆ ಮಾಡಲಾಗಿತ್ತು. ಸೂರತ್ತಿನ ಪರೇಖ್ ಅವರು, ನೂರಾರು ಪ್ರಾಚೀನ ಚಿತ್ರಗಳ ಪ್ರದರ್ಶನ ನೀಡಿದ್ದರು. ಅಂತೆಯೇ ಒನ್ ಕಲಾಪ್ರದರ್ಶನಕ್ಕೆ ಇದು ಯಾವ ಪ್ರಮಾಣಕ್ಕೆ ಏರಿತು ಎಂಬುದನ್ನು ಅನಸು ಅವರೇ ದಾಖಲಿಸಿದ್ದಾರೆ :

"ಭಾರತದ ವಿವಿಧ ಪ್ರಾಂತಗಳಲ್ಲಿ ಹೆಸರಾಂತ ಕಲಾವಿದರು ಈ ಪ್ರದರ್ಶನಕ್ಕೆ ತಮ್ಮ ಕಲಾಕೃತಿಗಳನ್ನು ಕಳುಹಿಸಿಕೊಟ್ಟಿದ್ದರು. ಪಂಜಾಬಿನ ಹೆಸರಾಂತ ಕಲಾವಿದರಾದ ಮಿ॥ ಅಬ್ದುರ್‌ರಹಿಮಾನ್ ಚುಗತಾಯಿ ಆರು ಭವ್ಯ ಪೇಯಿಂಟಿಂಗ್‌ಗಳನ್ನು. ಇವರ ಅನುವರ್ತಿಗಳಾದ ಕಲಾವಿದ ರೂಪ್ ಮತ್ತು ಅಫ್‌ಫಾರ್‌ರವರು ಪ್ರತಿಯೊಬ್ಬರು ಮೂರು ಚಿತ್ರಗಳನ್ನೂ ಕಳುಹಿಸಿದ್ದರು. ಮಿಸ್ ಟಾಜ್‌ಮಿರ್ ಸಾ ಪಾರ್ಶಿ ರಾಜಕುಮಾರಿಯ ಭವ್ಯ ಚಿತ್ರ ಪ್ರದರ್ಶಿಸಿದ್ದರು. ವೆಂಕಟರತ್ನಂ ಮತ್ತಿತರರು ಅನೇಕ ಮೂರ್ತಿ ಚಿತ್ರಗಳನ್ನು ಪ್ರಕೃತಿಯ ಭವ್ಯ ನೈಸರ್ಗಿಕ ದೃಶ್ಯ ಚಿತ್ರಪಟಗಳನ್ನು ಕಳುಹಿಸಿದ್ದರು. ಶ್ರೀಮತಿ ಚುಚ್ಚಂ ಕೃಷ್ಣಮ್ಮ ಮತ್ತು ಸಿ. ಸತ್ಯವಾಣಿಯವರ ನೂತನ ಸಂಪ್ರದಾಯದ ಚಿತ್ರಗಳು ಆಂಧ್ರದ ಜನಜೀವನದ ಪ್ರತೀಕಗಳಂತಿದ್ದವು. ಬಂಗಾಳದ ಹೆಸರಾಂತ ಕಲಾವಿದ ಶ್ರೀ ದೇವೀಪ್ರಸಾದ ರಾಯ್ ಚೌಧುರಿ ಮತ್ತು ಕಲಾವಿದ ನಂದಲಾಲ ಬೋಸರು ಮತ್ತಿತರ ಕಲಾವಿದರ ಚಿತ್ರಗಳು ನೂತನ ಸಂಪ್ರದಾಯದ ಉತ್ತಮ ನಿದರ್ಶನಗಳಂತಿದ್ದವು. ರಾಯ ಚೌಧುರಿಯವರ 'ಸುಗ್ಗಿಯ ಸಂಗ್ರಹ' ಕಣ್ಮನಗಳಿಗೆ ಆನಂದದಾಯಿ ಚಿತ್ರವೆನಿಸಿದ್ದಿತು. ಸಂಧ್ಯಾರಾಗ, ಭಂಗಾರದ ಬೆಳೆ ಮುಂತಾದ ಚಿತ್ರಗಳು ಸೌಂದರ್ಯದ ಖನಿಯಂತಿದ್ದವು. ಮೈಸೂರಿನ ಕಲಾವಿದರಾದ ವೈ. ಸುಬ್ರಹ್ಮಣ್ಯರಾಜು ಇವರ ಸಂಯೋಜನೆ ಚಿತ್ರ ಒಂದು ಉತ್ತಮ

ಚಿತ್ರವಾಗಿದ್ದಿತು. ಶ್ರೀ ವೀರಪ್ಪನವರ 'ಅರ್ಜುನ'. ಎಲ್ಲರ ಮೆಚ್ಚಿಗೆಗೆ ಬರುವ ಚಿತ್ರ. ಹೀಗೆ ಬೊಂಬಾಯಿ. ಲಕ್ನೋ. ಮದರಾಸು ನಗರಗಳಿಂದ ಅನೇಕ ಉತ್ತಮ ಚಿತ್ರಗಳು ಪ್ರದರ್ಶನಗೊಂಡಿದ್ದವು. ಬೊಂಬಾಯಿ ಉನ್‌ವಾಲಾ ಮತ್ತು ನಲ್‌ವಾಲಾ ಇವರ ರಮಣೀಯ ಫೋಟೋಗ್ರಫಿ ಚಿತ್ರಗಳನ್ನು ಪ್ರತ್ಯೇಕ ಭಾಗವಾಗಿ ಪ್ರದರ್ಶಿಸಲಾಗಿತ್ತು"[೨]

ಕೇವಲ ತಾನೊಬ್ಬ ಶಿಕ್ಷಕ. ಕಲಾವಿದ. ಸಾಹಿತಿ. ಪತ್ರಿಕೋದ್ಯಮಿಯಾಗಿ ಮಾತ್ರವೇ ಉಳಿದಿದ್ದರೆ ರಾಷ್ಟ್ರಮಟ್ಟದ ಇಂತಹ ಕಲಾಪ್ರದರ್ಶನ ಏರ್ಪಡಿಸಲು ಸಾಧ್ಯವಿತ್ತೆ ಎಂಬುದನ್ನು ಯಾವ ಕಾಲಕ್ಕು ಗಂಭೀರವಾಗಿ ಆಲೋಚಿಸಬೇಕಾದ ಸಂಗತಿ. ತಾನೊಬ್ಬ ಸಮರ್ಥ ಸಂಘಟಕನಾಗಲು ಇವೆಲ್ಲ ಮುಖಗಳೂ ಪೂರಕವಾಗಿದ್ದವು ಎನ್ನುವುದೇ ಸರಿಯಾದರೆ. ಈ ಶತಮಾನದ ಎರಡನೇ ದಶಕದಲ್ಲಿ ಇದೇ ಭಾರತದಲ್ಲಿಯೇ ಇನ್ನೆಷ್ಟು ಮಂದಿ ಈ ಬಗೆಯುವರು ಸಿಗುತ್ತಾರೆ ಎಂಬುದನ್ನು ಇನ್ನಾದರೂ ತಿಳಿಯಬೇಕಾಗಿದೆ. ದುರ್ದೈವವೆಂದರೆ, ನಮ್ಮ ಇವತ್ತಿನ ಕಲಾವಿದರಿಗೆ. ಕಲಾಶಿಕ್ಷಕರಿಗೆ. ಕಲಾಸಾಹಿತಿಗಳಿಗೆ, ಕಲಾಪತ್ರಿಕೋದ್ಯಮಿ ಸಂಕುಲಕ್ಕೆ - ಕನ್ನಡ ನೆಲದಲ್ಲಿ ಇಂತಹ ಮಹತ್ವದ ಸಾಧನೆ ನಡೆದಿತ್ತು. ಅದಕ್ಕೆ ಅ. ನ. ಸುಬ್ಬರಾಯರು ಕಾರಣರಾದವರು ಎಂಬ ತಿಳಿವಿನ ವೈಜ್ಞಾನಿಕ ವಿಸ್ಮೃತಿಗೆ ನಗಬೇಕೊ ಅಳಬೇಕೊ ಎನ್ನುವಂತಾಗುತ್ತದೆ.

ಕಲಾಮಂದಿರದ ಅ. ನ. ಸುಬ್ಬರಾವ್ ಒಳಗಿನ ಸಂಘಟಕತ್ವಕ್ಕೆ ಇಂತಿಷ್ಟೇ ಚಹರೆ ಎಂದು ಹೇಳಬರುವುದಿಲ್ಲ. ಕಲಾವಿದರ ರಕ್ಷಣೆ. ವಿದ್ಯಾರ್ಥಿಗಳ ಪೋಷಣೆ. ಮಹಿಳೆಯರಿಂದ ಕಲಾಸಂಸ್ಥೆಯ ಸ್ಥಾಪನೆ. ನಾಡಿನಾದ್ಯಂತ ಕಲಾಭಿರುಚಿಯ ಹಂಚಿಕೆ. ರಾಷ್ಟ್ರಮಟ್ಟದ ಕಲಾಪ್ರದರ್ಶನ

೨. ಕಲಾಮಂದಿರದ ಇತಿಹಾಸ, ಕಲಾನಿವೇದನ, ಪು. ೧೬೮, ೧೯೬೯

ಏರ್ಪಾಟುಗಳ ಜೊತೆಗೇ ಕಲಾ ಶಿಬಿರಗಳನ್ನು ಅಲ್ಲಲ್ಲಿ ನಡೆಸಿದ್ದು. 'ಕಲಾ' ಪತ್ರಿಕೆ ಪ್ರಾರಂಭಿಸಿದ್ದು. ಆ ಮೂಲಕ ತಾನೂ ಬರವಣಿಗೆ ಮಾಡಿ ಬರಹಗಾರರ ಪಡೆಯನ್ನೇ ಕಟ್ಟಿದ್ದು - ಇವೆಲ್ಲವನ್ನು ಬಿಡಿ ಬಿಡಿ ಎಂದು ನೋಡಲು ಬಾರದಿದ್ದರೂ, ತಮಗೆ ತಾವೇ ಹೊತ್ತ ಜವಾಬ್ದಾರಿ ಪಾತ್ರಗಳು ಎಂಬುದನ್ನು ಈವರೆಗೆ ಗಮನಿಸಿದೆವು. ಹಾಗೆಯೇ ಇನ್ನೂ ಒಂದು ಹೆಜ್ಜೆ ಮುಂದಿಟ್ಟು. ಅವತ್ತಿನ ಸಾಮಾಜಿಕ. ರಾಜಕೀಯ ಆಗುಹೋಗುಗಳಿಗೂ ತಮ್ಮನ್ನು ಒಪ್ಪಿಸಿಕೊಂಡರು. ಎಂಬುದೂ. ಕಲಾರಂಗಕ್ಕೇ ಇರುವ ಇನ್ನೊಂದು ಮುಖದ ಅವಶ್ಯಕತೆಯನ್ನು ಮನಗಾಣಿಸುತ್ತದೆ :

> "ಕಾಂಗ್ರೆಸ್ಸು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ವೇಳೆ ಕಲಾಮಂದಿರ ಒಂದು ಪ್ರಧಾನ ಕೇಂದ್ರವಾಗಿ ಕಾರ್ಯ ನಡೆಸಿದೆ - ಕರ್ನಾಟಕದ ನಾನಾ ಭಾಗಗಳಿಗೆ ಸಂಪರ್ಕ ನೀಡುವ ಕಾರ್ಯದಲ್ಲಿ ಕಲಾಮಂದಿರ ತಕ್ಕ ಮಟ್ಟಿನ ಸೇವೆ ಸಲ್ಲಿಸಿದೆ."[೩]

ಕೇವಲ ಸಂಘಟಕರು ಎಂದಷ್ಟೇ ಅಲ್ಲ. ಮಹತ್ವದ ಇನ್ನೊಂದು ಪಾತ್ರವನ್ನು ಆ ಕಾಲಕ್ಕೇ ಅನಸು ವಹಿಸಿದ್ದರು ಎಂಬುದನ್ನು ಮರೆಯಬಾರದು. ಅದು ಅನ್ಯ ಶಿಸ್ತುಗಳ ಸಂಬಂಧ ಎಂದು ಶತಮಾನದ ಉತ್ತರಾರ್ಧದಲ್ಲಿ ನಾವು ಕಂಡುಕೊಂಡ ಜ್ಞಾನದ ಪರಿಕಲ್ಪನೆಗೆ, ಶತಮಾನ ಪೂರ್ವದಲ್ಲಿಯೇ ಮೂರ್ತಸ್ವರೂಪ ನೀಡಿದ್ದವರಲ್ಲಿ ಅನಸು ಕೂಡಾ ಒಬ್ಬರು. ಅದರಿಂದಾಗಿ, ಚಿತ್ರಕಲೆ - ಕುಶಲ ಕಲೆ. ನೆಯಿಗೆ ಇವೆಲ್ಲವೂ ಕಲೆಯ ಏಕರೂಪವೆಂದು ಅನಸು ತಿಳಿದಂತೆಯೇ. ನಾಟಕ, ಜಾನಪದ. ಸಂಗೀತ ಕಲೆಗಳ ವಿಚಾರ ವಿನಿಮಯ ಕೂಡಾ ನಮ್ಮ ಸಂಸ್ಕೃತಿಯ ಪ್ರಧಾನ ಅಂಗಗಳೆಂದೇ ಕಂಡುಕೊಂಡು. ಸಂಘಟನೆಗೆ ತೊಡಗಿದವರು ಅನಸು.

೩. ಕಲಾಮಂದಿರದ ಇತಿಹಾಸ, ಕಲಾನಿವೇದನ, ಪು. ೧೫೮, ೧೯೬೯

ಕಲಾಮಂದಿರದ ಆಶ್ರಯದಲ್ಲಿ ಗರೂಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ. ಗುಬ್ಬಿವೀರಣ್ಣನವರ ಶಿವಾನಂದ ಥಿಯೇಟರಿನಲ್ಲಿ ೧೫ ಏಪ್ರಿಲ್ ೧೯೩೨ ರಂದು ಪ್ರಪ್ರಥಮ ನಾಟಕ ಸಮ್ಮೇಳನ ಕೂಡ ಅನಸು ಹಮ್ಮಿಕೊಂಡಿದ್ದರು. ಅದೇ ರೀತಿ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರ ಅಧ್ಯಕ್ಷತೆಯಲ್ಲಿ ಯಕ್ಷಗಾನ. ನೃತ್ಯ. ಬೊಂಬೆಯ ಆಟ. ತೊಗಲು ಬೊಂಬೆಯ ಆಟ. ಸುಗ್ಗಿ ಕುಣಿತ ಮುಂತಾದ ಜಾನಪದ ಕಲಾ ಪ್ರದರ್ಶನಗಳನ್ನು ಬೆಂಗಳೂರಿನಲ್ಲಿ ಮೊಟ್ಟಮೊದಲಿಗೆ ಏರ್ಪಡಿಸಿದ ಹಿರಿಮೆ ಅನಸು ಅವರದು. ಅಂತೆಯೆ. ಶಾಸ್ತ್ರೀಯ ಸಂಗೀತದ ಪ್ರಥಮ ಸಂಗೀತ ಸ್ಪರ್ಧೆ ಕೂಡಾ ಒಮ್ಮೆ ನಡೆಸಿದರು. ತುಮಕೂರಿನ ಜಿ. ಚನ್ನಮ್ಮ ಅಂತಹವರು. ಬೆಂಗಳೂರಿಗೆ ಬಂದು ನೆಲೆನಿಲ್ಲಲು. 'ಗಾನಮಂದಿರ' ಕಟ್ಟಿ ಸಂಗೀತ ರಂಗದಲ್ಲಿ ದುಡಿಯಲು ಅನಸು ನಂಟು ಕೂಡ ಪ್ರಬಲ ಕಾರಣ. ಹಾಗೆಯೇ. ಅದುವರೆಗೆ ಕವಿಸಮ್ಮೇಳನ ಎಂದು ನಡೆದದ್ದು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಲ್ಲಿ ೧೯೨೮ರಲ್ಲಿ. ಕೆ. ವಿ. ಪುಟ್ಟಪ್ಪ (ಕುವೆಂಪು) ಅವರ ಅಧ್ಯಕ್ಷತೆಯಲ್ಲಿ. ಆದರೆ ಅದು ವಿದ್ಯಾರ್ಥಿ ಕವಿ ಸಮ್ಮೇಳನ ಮಾತ್ರ. ಅನಂತರವೂ ೪ ವರ್ಷಗಳು ಯಾವ ಬಗೆಯ ಕವಿ ಸಮ್ಮೇಳನವೂ ಈ ನೆಲದಲ್ಲಿ ನಡೆಯಲಿಲ್ಲ ಎಂಬುದನ್ನು ನೆನೆದರೆ. ಸಂಘಟಕ ಅನಸು ಮಹತ್ವ ಗೊತ್ತಾಗುತ್ತದೆ. ಹೀಗಿರುವಾಗ. ೧೯೩೨ರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ. ಪ್ರಪ್ರಥಮ ಕವಿ ಸಮ್ಮೇಳನ. ನಿಯೋಜಿಸಿದವರು ಅನಸು. ಅಲ್ಲಿನ ಒಂದು ವಿಶೇಷ : ಇತರ ಕವಿಗಳ ಜೊತೆಗೆ. ಭಾಗವಹಿಸದ ತೀನಂಶ್ರೀ. ಎಂವಿಸೀ. ದೇಶಿಕಾಚಾರ್ಯ ಅವರ ಕವಿತೆಗಳನ್ನು ಓದಿದವರು ಅ.ನ.ಕೃಷ್ಣರಾಯರು. ಗೊರೂರು ರಾಮಸ್ವಾಮಿ ಅಯ್ಯಂಗಾರರು.

ನಿರಂತರವಾಗಿ ಈ ಎಲ್ಲ ಕಲೆಗಳಿಗೂ ಕಲಾಮಂದಿರ ಕೇಂದ್ರವಾಗಿ ನಿಲ್ಲಬೇಕು. ಅದಕ್ಕಾಗಿ ಬೃಹತ್ ಕಟ್ಟಡ ಕಟ್ಟಬೇಕು - ಎಂದು ತಮ್ಮ

೯೦ ರಲ್ಲಿಯೂ ಹಂಬಲಿಸಿ, ಹೆಣಗಿ ಆಸು ನೀಗಿದವರು ಅನಸು. ಕಲಾಮಂದಿರ ಪ್ರಾರಂಭವಾದ ೧೯೧೯-೨೦ರಲ್ಲಿ, ೬೫೬ರೂ ಆದಾಯದಲ್ಲಿ ೧೨೫೪ರೂ ೮ ಆಣೆ ಖರ್ಚು ಮಾಡಿದ ಅನಸು, ೧೯೬೭-೬೮ರ ಕಾಲಕ್ಕೇನೂ ಬದಲಾದಂತೆ ಕಾಣಲಿಲ್ಲ. ೬೨೭೨ರೂ ಆದಾಯಕ್ಕೆ ೧೦, ೧೬೮ ರೂ ೧೫ ಪೈಸೆ ಖರ್ಚು ಮಾಡಿ, ಕಲಾಮಂದಿರವನ್ನು ನಡೆಸುತ್ತಿದ್ದರು ಎಂಬುದನ್ನು ನಮ್ಮ ಹೃದಯವಂತ ಜನ ಒಮ್ಮೆ ಧ್ಯಾನಿಸಬೇಕಾದ ಅಗತ್ಯವಿದೆ. ಇದು ಹೆಮ್ಮೆಯ ವಿಷಯವಲ್ಲ, ನೋವಿನ ಸಂಗತಿ. ಬದಲಾದದ್ದು ಹಣಕಾಸಿನ ಪರಿಸ್ಥಿತಿಯಲ್ಲಿ ಆಣೆ ಹೋಗಿ ಪೈಸೆ ಬಂದಿತಷ್ಟೆ ! ಆದರೆ ನಮ್ಮ ಪ್ರಜಾಪ್ರಭುತ್ವದ ನಾಗರೀಕರು ಎಂದಿನಂತೆಯೇ ಇದ್ದರು.

ಅನಸು ಜೀವಮಾನವಿಡೀ ತುಳಿದ ಸೈಕಲ್ ಆಗಲಿ, ಅವರ ಹುಬ್ಬು, ಸುಕ್ಕುಗಟ್ಟಿದ ಮುಖ, ಸಾಧಾರಣ ಕಚ್ಚೆಪಂಚೆ ಕರಿಕೋಟು, ಬಾಗುತ್ತ ಬಂದ ಬೆನ್ನಾಗಲಿ - ಈ ಹೊರರೂಪಕ್ಕೆ ತಮಾಷೆ ಮಾಡುತ್ತಿದ್ದ ಹೊಸ ಜನಾಂಗದ ತರುಣರ ತಂಡ ಕೂಡ ಅನಸು ಮುಂದೆ ಹುಟ್ಟಿಕೊಂಡಿತು. ಅನಸು ನಾಟಕಗಳನ್ನೋ, ಅವರ ಓಡಾಟವನ್ನೋ ಗಿನ್ನಿಸ್ ರೆಕಾರ್ಡ್‌ಗೆ ಎಂದು ತಿಳಿದುಕೊಂಡ ಜಾಣಜಾಣೆಯರೂ ಅನಸು ಮುಂದೆ ತಲೆಎತ್ತಿದ್ದರು. ಇಂತಹ ಕಣ್ಣಿದ್ದೂ ಕಳೆದುಕೊಂಡವರ ಬದುಕು, ಸಂಸ್ಕೃತಿ, ಕಲೆ, ಸಮಾಜದ ಕಣ್ಣು ತೆರೆಸಲೆಂದೇ ಒಂದು ಶತಮಾನ ಪೂರ್ತಾ ಬವಳಿಬಂದಂತೆ, ಬೈರಾಗಿಯಂತೆ, ಅವಧೂತನಂತೆ ದುಡಿದು ಕರಿಗದವರು ಅನಸು.

ಹಿರಿಯ ಮಗಳು ಹುಟ್ಟುವಾಗಲೆ ದೈಹಿಕ ನ್ಯೂನತೆಯಿಂದ ಹುಟ್ಟಿದ್ದು, ಆನಂತರ ಮೂರು ಮಕ್ಕಳ ಸಂಸಾರದಲ್ಲಿ, ಯಾವಗಳಿಗೆಯಲ್ಲಿ ಮನೆಮಠದ ಸ್ವಂತಜೀವನಕ್ಕಾಗಿ ಅನಸು ಚಿಂತಿಸಿದರೊ ತಿಳಿಯದಾಗಿದೆ. ೯೦ ವರ್ಷಗಳ ಬದುಕಿನ ಯಾವ ಕ್ಷಣದಲ್ಲಿ ಇವೆಲ್ಲಕ್ಕೂ ಅವರು

ಇಟ್ಟು ಆಯುಷ್ಯ ಪಟ್ಟಿ ಹೇಳ ಬರುವುದಿಲ್ಲ. ಅದಕ್ಕಾಗಿ ಅವರ ಕುಟುಂಬ ತೆತ್ತ ಬಿಸಿಯುಸಿರು. ಅನುಭವಿಸಿದ ಕಷ್ಟನಷ್ಟಗಳ ಕಣ್ಣೀರ ಕೋಡಿ. ಕಟ್ಟಿದ ಹೊಟ್ಟೆ ಬಟ್ಟೆಗಳ ಹೊತ್ತಿನ ಲೆಕ್ಕ. ನುಂಗಿದ ಅವಮಾನ. ತಾತ್ಸಾರದ ರಕ್ತದ ಒತ್ತಡ. ಎಲ್ಲೋ ಒಮ್ಮೊಮ್ಮೆ ಪುಟಿದ ಪ್ರೀತಿಪ್ರೇಮದ ಸಂಬಂಧಗಳ ಯಾತನೆಯನ್ನು ಅಕ್ಷರ ಚರಿತ್ರೆ ಜೀವತುಂಬಿಕೊಡುವುದು ಕಷ್ಟವಾಗುತ್ತದೆ.

ವ್ಯಕ್ತಿತ್ವ

ಬಾಲ್ಯದಲ್ಲಿಯೇ ಕಲೆಯ ಬಗ್ಗೆ ಆಸಕ್ತಿ. ಕುಲಮತಸ್ಥರಿಗೆ ಕಲಾವಿದ್ಯಾಭ್ಯಾಸ ಎಂಬ ತಪ್ಪು ತಿಳುವಳಿಕೆ ಬಗ್ಗೆ ಇದ್ದ ನೋವು. ಆ ಸುಮಾರಿಗೇ ತಂದೆಯ ಸಾವಿನಿಂದ ಆವರಿಸಿದ ಬಡತನ - ಈ ಹುಟ್ಟು. ಪರಿಸರ. ಬೆಳವಣಿಗೆಗಳೇ ಅ. ನ. ಸುಬ್ಬರಾಯರನ್ನು ಕಲಾಮಂದಿರದ ಅ. ನ. ಸುಬ್ಬರಾಯರನ್ನಾಗಿ ರೂಪಿಸಿವೆ. ಅವರ ಜೀವಮಾನವಿಡೀ ಎದುರಾದ ಎಲ್ಲ ಸಂದರ್ಭಗಳಲ್ಲಿಯೂ ಇವೇ ನಿರ್ಣಾಯಕ ಪಾತ್ರವನ್ನು ವಹಿಸಿವೆ.

ಬಡತನದ ಹಿನ್ನಲೆಯಲ್ಲಿ ಶಿಕ್ಷಕ ವೃತ್ತಿಯನ್ನು ಆರಿಸಿಕೊಂಡು. ಕೇವಲ ೧೦ ತಿಂಗಳಲ್ಲೆ ಕಲಿಕೆ ಮುಗಿಸಿ ಬರಲು ಹೊರಟಂತಹ ಲೆಕ್ಕಾಚಾರ: ಆದರೆ ಎಂ. ಹಿರಿಯಣ್ಣ ಅವರಂಥ ಸೌಂದರ್ಯ ಶಾಸ್ತ್ರ ಮೀಮಾಂಸಕ ಗುರುವಿನ ಹಿತಬೋಧನೆಯಿಂದ. ಚಿತ್ರಕಲೆಯ ಅಭ್ಯಾಸಕ್ಕೆ ಆಳವಾಗಿ ತೊಡಗಿದ್ದು - ಅನಸು ಜೀವನ ಮಿತಿಯೂ ಅಹುದು. ಸಾಧನೆಯ ವ್ಯಾಪ್ತಿಯೂ ಅಹುದು. ಅಂದು. ವಿದ್ಯಾಭ್ಯಾಸ ಎಂಬುದು ಕಾರಕೂನರನ್ನು ಸಿದ್ಧಪಡಿಸುವ ಪರಿಮಿತಿಗೆ ಒಳಗಾಗುವುದನ್ನು ವಿರೋಧಿಸಿ. ಸ್ವತಂತ್ರವಾಗಿ ನಿಂತು : ವಿದ್ಯೆ. ಕಲೆ. ಉದ್ಯೋಗ. ಬದುಕಿಗೆ ಹಿರಿತನವನ್ನು ತಂದುಕೊಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಅರಸಿ ಹೊರಟ ಪಯಣ ಅನಸು ಸಾಧನೆ ಗರಿಮೆಯೂ ಅಹುದು.

ಒಂದು ಕಡೆ ಸ್ವತಂತ್ರ ವ್ಯಕ್ತಿತ್ವ ನಿರ್ಮಾಣಕ್ಕೆ ದುಡಿಮೆ. ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನ. ಇನ್ನೊಂದು ಕಡೆಗೆ. ರಾಷ್ಟ್ರದ ಏಕತೆ. ಸ್ವಾತಂತ್ರ್ಯಗಳಿಕೆಗೆ ತ್ಯಾಗ. ಸೇವೆ. ಸತ್ಯ ಶೋಧನೆಗೆ ಗಾಂಧೀಜಿ ಆದರ್ಶದ ಬೆಂಬಲ. ಮತ್ತೊಂದು ಕಡೆಗೆ. ಕಲೆ. ಸೌಂದರ್ಯ ತತ್ವ.

ಶಿಕ್ಷಕನ ಮಹತ್ವವನ್ನು ಎದೆಯಲ್ಲಿ ಬಿತ್ತಿದ ಎಂ. ಹಿರಿಯಣ್ಣನವರ ಭಾರತೀಯ ಮೌಲ್ಯಗಳ ವಿದ್ಯಾದಾನದ ಋಣ. ಈ ತ್ರಿವೇಣೀ ಸಂಗಮದಲ್ಲಿ ಮಿಂದು ಏಳುವ ಸಾಹಸಕ್ಕೆ ತಮ್ಮನ್ನು ತಾವು ಒಡ್ಡಿಕೊಂಡವರು ಅನಸು. ಅದರ ಫಲಿತಾಂಶವೇ ಕಲಾಶಿಕ್ಷಕ, ಕಲಾವಿದ, ಕಲಾಸಾಹಿತಿ, ಕಲಾಪತ್ರಿಕೋದ್ಯಮಿ, ಕಲಾಸಂಘಟಕರಾಗಿ ತಮ್ಮ ಸಮಗ್ರ ವ್ಯಕ್ತಿತ್ವವನ್ನು ಕಂಡು ಕೊಳ್ಳಲು ನಡೆಸಿದ ೬೦ ವರ್ಷಗಳ ಸುದೀರ್ಘ ಪ್ರವಾಸವೇ ಅನಸು ಬದುಕಿನ ವಿಶೇಷ. ಈ ಶತಮಾನದ ಕಲಾಜೀವನದ ಮಾದರಿ ಕೂಡ.

ಚಿಕ್ಕಂದಿನಿಂದೇ ಬಡತನ, ಕಲಾಸಕ್ತಿ, ತಪ್ಪು ತಿಳುವಳಿಕೆ ಬಗ್ಗೆ ಇರುವ ನೋವನ್ನು ತಾವು ಅನುಭವಿಸಿದ್ದರಿಂದಲೆ, ತಮ್ಮ ಮುಂದೆ ಬಂದು ನಿಂತ ಜನರಿಗೆ, ವಿದ್ಯಾರ್ಥಿಗಳಿಗೆ ಹಗಲು ಇರುಳೆನ್ನದೆ ಅನಸು ಸಹಾಯಹಸ್ತ. ಕಲೆ ಕೇವಲ ಹುಟ್ಟಿನಿಂದ ಬಂದ ಪ್ರತಿಭಾವಂತವರಿಗೆ, ಶ್ರೀಮಂತರಿಗೆ ಎಂಬ ಮೀಸಲು ಜೀವನ ಕ್ರಮದ ಬಗ್ಗೆಯೇ ಒಂದು ರೀತಿ ಸಾತ್ವಿಕ ವಿರೋಧ. ಆ ಕಾರಣಕ್ಕಾಗಿ ನಿರಂತರ ಹೋರಾಟ.

೧೯೨೭ರಲ್ಲಿ ಆಳುವ ಮಹಾಸ್ವಾಮಿಗಳ ಆಳ್ವಿಕೆಯ ರಜತ ಮಹೋತ್ಸವ ಸಂದರ್ಭದಲ್ಲಿ ರಾಜಭಕ್ತಿ ಪ್ರದರ್ಶಿಸಲು ಕಲಾಮಂದಿರದ ಪರವಾಗಿ ಬಿನ್ನವತ್ತಳೆ ಅರ್ಪಿಸುತ್ತಲೆ, ಮಹಾರಾಜರು ಕಲೆ - ಕಲಾವಿದರ ಬಗ್ಗೆ ಇಟ್ಟುಕೊಂಡ ಧೋರಣೆ ಬಗ್ಗೆ ಟೀಕೆ ಕೂಡ ಮಾಡಿರುವುದು ಅನಸು ಕಲೆ ಮತ್ತು ಬದುಕಿನ ಸತ್ಯ ನಿಷ್ಠುರತೆಯ ದ್ಯೋತಕ.

ಹಾಗೆಯೇ ಎ. ಆರ್. ಕೃಷ್ಣಶಾಸ್ತ್ರಿಯವರು, ಟಿ. ಎಸ್. ವೆಂಕಣ್ಣಯ್ಯನವರು ಕಟ್ಟಿದ 'ಕರ್ಣಾಟಕ ಸಂಘ'ದ ಒಂದು ಸಂದರ್ಭದಲ್ಲಿ ತಳೆದ ನಿಲುವಿನ ಬಗ್ಗೆ, ಪತ್ರಿಕೋದ್ಯಮಿ ಅನಸು ಪ್ರಬಲ ಆಕ್ಷೇಪ. ಕೊನೆಗೆ "ಕಲಾ" ಪತ್ರಿಕೆಯ ಚಂದಾದಾರರಾದರೂ, ಆ ಮಹಿಮಲಾನ್ವಿತರ

ಬಗ್ಗೆ ಹಾಗೆ ನಡೆದುಕೊಂಡದ್ದು ಸರಿಯಲ್ಲ ಎಂಬ ಸೌಜನ್ಯವಿದ್ದರೂ, ತಾನು ಪ್ರಶ್ನಿಸಿದ ನಿಲುವು ಪತ್ರಕರ್ತನಾಗಿ ಸರಿಯಾದುದು ಎಂಬ ಜೀವನ ಮೌಲ್ಯದ ಗಟ್ಟಿತನಕ್ಕೆ ಸಾಕ್ಷಿ.

ಒಮ್ಮೆ ವಿದ್ಯಾ ಇಲಾಖಾ ಪ್ರಧಾನ ಇನ್‌ಸ್ಪೆಕ್ಟರ್ ಒಬ್ಬರು, ಶಾಲಾ ಪರೀಕ್ಷೆ ನಿಮಿತ್ತ ಕಲಾಮಂದಿರಕ್ಕೆ ಬಂದಾಗ, ಧೂಳೀಚಿತ್ರ ಪ್ರಯೋಗ ನೋಡಿ, ಒಳ್ಳೆಯ ಲಾಭದ ಕೈ ಕೆಲಸ ಇದು ಎಂದು ತಿಳಿದು, ತಾವೇ ಅದಕ್ಕೆ ಬಂಡವಾಳ ಹೂಡುವುದಾಗಿಯೂ, ಇನ್ನು ಮುಂದೆ ಈ ಕಲೆಯನ್ನು ಯಾರಿಗೂ ಹೇಳಿಕೊಡುವುದು ಬೇಡ, ದೊಡ್ಡ ಪ್ರಮಾಣದಲ್ಲಿ ಇದನ್ನು ತಯಾರುಮಾಡಿ ಎಂದು ಆಧುನಿಕ ವ್ಯಾಪಾರದ ಗುಟ್ಟನ್ನು ಅನಸುಗೆ ಅವರು ಸೂಚಿಸಿದರು. ಆಕ್ಷಣವೇ, ತಾನು ಮೂಲತಃ ಕಲಾ ಶಿಕ್ಷಕ. ಹೇಳಿಕೊಡುವುದೇ ತನ್ನ ಕರ್ತವ್ಯ. ಈಗಾಗಲೇ ಈ ಕುರಿತು ಪುಸ್ತಕ ಬರೆದು ಸಮಾಜದ ಮುಂದೆ ಬಹಿರಂಗಗೊಳಿಸಲಾಗಿದೆ ಎಂಬ ಅಂಶವನ್ನು ಸ್ಪಷ್ಟಪಡಿಸಿದ ಕಲಾಜೀವನದ ಮಾನವ ಪ್ರೇಮಿ ಅನಸು.

ಬೆಂಗಳೂರು ಗಣಪತಿ ಗಲಾಟೆಯಲ್ಲಿ, ಕಲಾಮಂದಿರದ ವ್ಯವಸ್ಥಾಪಕ ಅನಸು ಸಂಚುಗಾರರೆಂಬ ಹುಸಿ ಆರೋಪ. ಇನ್‌ಸ್ಪೆಕ್ಟರ್ ಜನರಲ್ ಆಗಿದ್ದ ಎನ್. ಎಸ್. ಸುಬ್ಬರಾಯರು, ಅದರ ಪರಿಣಾಮವಾಗಿ, ಗ್ರ್ಯಾಂಟ್ ನಿಲ್ಲಿಸುವ ಆರ್ಡರ್‌ಅನ್ನು ಸ್ವತಃ ಕಳಿಸಿದರು. ಆದರೇನು, ಕಲಾಮಂದಿರದ ಯಾವ ಕಲಾಪಗಳೂ ನಿಲ್ಲಲಿಲ್ಲ. ಪರೀಕ್ಷೆ ಸಂದರ್ಭ ಬಂದಿತು. ಎಂದಿನಂತೆ ಬಡ ವಿದ್ಯಾರ್ಥಿಗಳು ಪರೀಕ್ಷೆಗೆ ಹಣ ಕಟ್ಟಲು. ಭಿಕ್ಷೆಗೆ ಹೋಗುವುದು ಅನಸು ದಾರಿ. ನೇರವಾಗಿ ಎನ್. ಎಸ್. ಸುಬ್ಬರಾವ್ ಮುಂದೆಯೂ ಹೋಗಿ ನಿಂತರು. ೩೦ ರೂ ನೀಡಿ, ವ್ಯಕ್ತಿಗೆ ಮೀರಿದ ಆದರ್ಶಗುಣವನ್ನು ಮೆಚ್ಚಿ ಹರಸಿದರು. ಆ ಸುಬ್ಬರಾವ್ ಈ ಸುಬ್ಬರಾವ್ ಅವರನ್ನು.

"ಕಲಾ" ಸಂಪುಟ ೧, ಸಂಚಿಕೆ ೬ ರಲ್ಲಿ "ಸ್ತ್ರೀ ಸೌಂದರ್ಯ" ಕುರಿತು ಅಭಿಪ್ರಾಯ ಭೇದವಿದ್ದರೂ ಆಹ್ವಾನಿತ ಲೇಖನ ಎಂದು

ಸಂಪಾದಕ ಮಾಲೀಕ ಅನಸು ಅದನ್ನು ಪ್ರಕಟಿಸಿದರು. ಪುಟ್ಟಿ ಸಂಪಾದಕೀಯ ಕೂಡ ಮುಂದಿಟ್ಟರು. ಅನಂತರ ಸಂಚಿಕೆಗಳಲ್ಲಿ ಪರವಿರೋಧದ ಪ್ರತಿಕ್ರಿಯೆಗಳನ್ನು ಮುದ್ರಿಸಿದರು. "ಸತ್ಯಶೋಧನೆಯಲ್ಲಿ ಮುಚ್ಚು ಮರೆಯು ಧರ್ಮವಲ್ಲ" ಎಂಬ ಆದರ್ಶ ತತ್ವವನ್ನು ನಂಬಿ - ಆಚರಿಸಿ ತೋರಿದವರು ಅನಸು.

೧೯೩೧ ಕಲಾವಿದ ದೇವೀ ಪ್ರಸಾದ್ ರಾಯ ಚೌಧುರಿ ಅವರ ಭೇಟಿಗೆ ಮದರಾಸಿಗೆ ಹೋದರು ಅನಸು. ಆಗಿನ 'ಕಲಾ' ಸಂಚಿಕೆಯಲ್ಲಿ ನಟ ಸ್ಥಾನಂ ನರಸಿಂಹರಾಯರ ಸ್ತ್ರೀ ವೇಷದ ನಾನಾ ಭಂಗಿಯ ಚಿತ್ರಗಳು ಅಚ್ಚಾಗಿರುವುದನ್ನು ನೋಡಿ. ಗಂಡು ಹೆಣ್ಣಿನ ಪಾತ್ರ ಧರಿಸುವುದನ್ನು ಮೆಚ್ಚಬಾರದು. ಉತ್ತೇಜಿಸಬಾರದು ಎಂಬ ಸೂಚನೆ ಅಭಿವ್ಯಕ್ತಿಸಿದರು. ಅಂದಿನಿಂದಲೆ ಒಪ್ಪಿ. ಮುಂದೆಯೂ ಪಾಲಿಸುತ್ತ ಬಂದೆವು ಎಂದು ಒಪ್ಪಿಕೊಳ್ಳುವ ಅನಸು ವಿನಯ ಮೌಲ್ಯಾಧಾರಿತವಾದದ್ದು.

ಪ್ರಾರಂಭಕ್ಕೆ ಕನ್ನಡ ನಾಡಿನ ವಿದ್ಯೆ. ಲಲಿತಕಲೆ ಮತ್ತು ಕುಶಲ ವಿದ್ಯೆಗಳ ಸಚಿತ್ರ ಮಾಸಪತ್ರಿಕೆ ಎಂದು 'ಕಲಾ' ಪತ್ರಿಕೋದ್ಯಮ ಶುರುಮಾಡಿ. ಮುಂದೆ ರಂಗಭೂಮಿಯ ಪ್ರಕಾರವನ್ನು ತಮ್ಮ ಮುಖವಾಣಿಯಲ್ಲಿ ಸೇರಿಸಿ ಕೊಂಡದ್ದು ಅನಸು ಬದುಕಿನ ರೀತಿ. ಹೀಗಾಗಿಯೇ ಕಲಾಮಂದಿರ. ಕ್ರಮೇಣ ಎಲ್ಲ ಕುಶಲ ಕಲಾ ಶಿಕ್ಷಣ ಕೇಂದ್ರ ಆಗಬೇಕು ಎಂದು ಕನಸು - ಯೋಜನೆ. ಈ ೯೦ ವರ್ಷಗಳ ಪ್ರಯತ್ನದಲ್ಲಿ ನಿವೇಶನವನ್ನು ಪಡೆಯಲಾಯಿತೇ ಹೊರತು. ತಮ್ಮ ಮನೋಮಂದಿರವನ್ನು ಮಕ್ಕಳು. ಮೊಮ್ಮಕ್ಕಳು. ಮರಿಮಕ್ಕಳಿಗೆ ಬಿಟ್ಟುಹೋಗಿದ್ದಾರೆ.

"ನನ್ನ ಹಾಗೂ ಕಲಾಮಂದಿರದ ಬಾಂಧವ್ಯ ಅವಿಭಾಜ್ಯ. ಆದರೂ ನನ್ನ ಆಲೋಚನೆ ಹಾಗೂ ಕಾರ್ಯಗಳು ಕಲಾಮಂದಿರಕ್ಕೆ

ಸೀಮಿತಗೊಂಡಿಲ್ಲ. ಯಾವುದೇ ಯೋಜನೆ ಕೈಗೊಳ್ಳಲಿ. ಅದರಲ್ಲಿ ಭಾರತದ ದೃಷ್ಟಿ ಪ್ರಧಾನವಾಗಿರುವುದು."*

ಎಂಬ ಧಾರ್ಮಿಕ ಒಳಸ್ರೋತವುಳ್ಳ ವ್ಯಕ್ತಿತ್ವ ಪಡೆದ ಅ. ನ. ಸುಬ್ಬರಾಯರು. ಕಲೆಯನ್ನು ಆಧರಿಸಿ ಭಾರತೀಯ ಸಂಸ್ಕೃತಿಯ ಪುನರುಜ್ಜೀವಕರಾದರು. ಒಂದು ಕಾಲಘಟ್ಟದ ಸಿದ್ಧಿಪುರುಷರು ಮಾತ್ರವೇ ಅಲ್ಲ. ಬದುಕಿನ ಸಮಗ್ರತೆಯ ಎಚ್ಚರವಾಗಿ. ಮಹತ್ವಾಕಾಂಕ್ಷಿಗಳ ಸಾಧನೆಯ ಸಂಕೇತವಾಗಿ. ನಿರಂತರ ಕಾರ್ಯಚಟುವಟಿಕೆಯ ಪ್ರತೀಕವಾಗಿ ಅ. ನ. ಸುಬ್ಬರಾಯರು ನಮ್ಮ ನಡುವೆ ಜೀವಂತವಾಗಿಯೇ ಉಳಿದಿದ್ದಾರೆ.

* ಪ್ರಬುದ್ಧ ಶಿಲ್ಪಿ ಹಾಗೂ ಕಲೆಗಾರ ದೇವೀ ಪ್ರಸಾದ ರಾಯ ಚೌಧುರಿ, ಕಲಾ ನಿವೇದನ, ಪುಟ ೭೫, ೧೯೬೯

ಅ. ನ. ಸುಬ್ಬರಾವ್ ಜೀವನದ ಕಾಲಘಟ್ಟಗಳು

೧೮೯೧ * ಈಗಿನ ಮಂಡ್ಯಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳಿನಲ್ಲಿ ಜನನ. ತಂದೆ : ನರಸಿಂಹಯ್ಯ. ತಾಯಿ : ವೆಂಕಮ್ಮ.

* ಒಡಹುಟ್ಟಿದವರು : ಅಣ್ಣ ಎ. ಎನ್. ಲಕ್ಷ್ಮೀ ನಾರಾಯಣರಾವ್. ಅಕ್ಕ : ಭಾಗೀರಥಮ್ಮ. ತಮ್ಮ ಎ. ಎನ್. ಸೂರ್ಯನಾರಾಯಣರಾವ್.

* ಮಡದಿ : ಗೌರಮ್ಮ

೧೯೧೬ * ಮೈಸೂರಿನ ನಾರ್ಮಲ್ ಟ್ರೈನಿಂಗ್ ಕಾಲೇಜಿನಲ್ಲಿ ಕಲಾ ಶಿಕ್ಷಕ.

* ದಕ್ಷಿಣ ಭಾರತದ ರಿಲೀಫ್ ಮ್ಯಾಪಿಗೆ ದಸರ ಪ್ರದರ್ಶನದಲ್ಲಿ ರಜತ ಪದಕ.

* "ಪುಷ್ಪರಚನೆ". "ಮಕ್ಕಳ ತಿದ್ದುವಿಕೆ" ಕೃತಿಗಳ ಪ್ರಕಟಣೆ.

೧೯೧೯ ಆಗಸ್ಟ್ ೧೨ * ಬೆಂಗಳೂರಿನಲ್ಲಿ "ಕಲಾಮಂದಿರ"ದ ಸ್ಥಾಪನೆ.

೧೯೨೮ * ಹಾನಗಲ್ಲಿನಲ್ಲಿ ನಡೆದ ಕಲಾಪ್ರದರ್ಶನದ ಮಹೋತ್ಸವದ ಅಧ್ಯಕ್ಷ.

೧೯೩೦ ಫೆಬ್ರುವರಿ * "ಕಲಾ" ಮಾಸಪತ್ರಿಕೆಯ ಪ್ರಾರಂಭ.

* "ಮಹಾತ್ಮಗಾಂಧಿಯವರ ವಿಚಾರಣೆ" ಎಂಬ ಪುಸ್ತಕ ಪ್ರಕಟಣೆ

* ಜಕಣಾಚಾರಿಯ ಸೋಲು, ರಂಗಪ್ಪನ ಓದು, ಶೇಖರ ಪ್ರಿಯಾ ಎಂಬ ಸುದೀರ್ಘ ಕಥೆಗಳ ಪುಸ್ತಕಗಳ ಪ್ರಕಟಣೆ.

* ಮಕ್ಕಳು : ಲಲಿತಾ, ಎ. ಎಸ್. ಮೂರ್ತಿ, ಎ. ಎಸ್. ರಾಮಕೃಷ್ಣ, ಕಲಾ ಎಸ್. ರಾಮನಾಥನ್.

೧೯೬೮-೯ * ಮೈಸೂರು ರಾಜ್ಯದ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ.

* ಸರಕಾರದಿಂದ ೫೦೦ ರೂ ಮಾಸಾಶನ.


* ನಾಟಕಗಳು : ಒಂದೇ ಒಂದು (ಇದರಲ್ಲಿ ನಾಯಕ ಪಾತ್ರ ವಹಿಸಿದ್ದರು), ಸಂಬಂಧ ಸಮಸ್ಯೆ, ಕೂಲಿ.

ಬದಲಿಲಾಕೆ. ನೇಕಾರ. ಅವಾಂತರ. ತಿರುಗಿಬಂದ ಭೂಪತಿ. ರಾಜಿಕಬೂಲಿ. ಹಳ್ಳಿಯ ಬದುಕು. ಬಣ್ಣದ ಗಡಿಗೆ. ಕಾಬೂಲಿವಾಲ. ಮಾಯಾವರ. ಶಾಂತಿಸಂದೇಶ. ಅರುಂಧತಿ.

೧೯೭೩ * 'ದೃಗ್ದರ್ಶನ' ಕೃತಿ ಪ್ರಕಟಣೆ.

* ಕರ್ನಾಟಕ ಚಿತ್ರಕಲಾವಿದರ ಮಹಾ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆ.

೧೯೮೧ ಮೇ ೨೦ * ಮರಣ. ಬೆಂಗಳೂರಿನಲ್ಲಿ.



ಅ. ನ. ಕೃ. ಹಸ್ತಾಕ್ಷರ